ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಸಂಖ್ಯೆ ೩೧– ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ಮಂತ್ರಿಗಳಿಂದ ಉತ್ತರ

† ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ವಿಷಯಕ್ಕೆ ಬರುವುದಕ್ಕೆ ಮೊದಲು ನನ್ನ ಒಂದು ಅಭಿಪ್ರಾಯ ಏನು ಎಂದರೆ, ಕಳೆದ ಏಳು ವರ್ಷಗಳಲ್ಲಿ ನಾವು ವಿರೋಧ ಪಕ್ಷದಲ್ಲಿದ್ದು ೧೯೮೯ರಲ್ಲಿ ಅಧಿಕಾರಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಓರ್ವ ಮಹಿಳೆಗೆ ಆರೋಗ್ಯ ಖಾತೆಯನ್ನು ಕೊಟ್ಟು ನಮ್ಮ ಮೇಲೆ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ, ಜವಾಬ್ದಾರಿಯನ್ನು ಕೂಡ ಕೊಟ್ಟಿದ್ದಾರೆ. ಈಗಾಗಿ ಈ ಒಂದು ನೆಲೆಯಲ್ಲಿ ನಾನು ಅವರಿಗೆ ಸಂಪೂರ್ಣ ಕೃತಜ್ಞತೆಗಳನ್ನು ಸಮರ್ಪಿಸುವುದರೊಂದಿಗೆ ಈ ೧೯೯೦–೯೧ನೇ ಸಾಲಿನ ಬೇಡಿಕೆಯನ್ನು ಮಂಡಿಸಿದಾಗ ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀಮಾನ್ ಪಿ. ಜಿ. ಆರ್. ಸಿಂಧ್ಯಾರವರು, ಅವರು ಈ ಹಿಂದೆ ಈ ಖಾತೆಯನ್ನು ೧೮ ತಿಂಗಳ ಕಾಲ ವಹಿಸಿಕೊಂಡು ಜವಾಬ್ದಾರಿ ನಿರ್ವಹಿಸಿದ್ದರು. ನಮ್ಮ ಬಗ್ಗೆ ಬಹಳ ಸೌಜನ್ಯತೆಯಿಂದ ವರ್ತಿಸಿದ್ದಾರೆ. ಏಕೆಂದರೆ ವಿರೋಧ ಪಕ್ಷ ಎಂದರೆ ಯಾವಾಗಲೂ ಟೀಕೆ ಮಾಡಲಿಕ್ಕೆ ಇರುವವರು ಎಂಬ ಭಾವನೆ ಜನರಲ್ಲಿ ಇರುತ್ತದೆ. ಅವರ ಜೊತೆಗೆ ಇನ್ನಿತರ ಮಾನ್ಯ ಸದಸ್ಯರುಗಳು ಕೂಡ ಆ ಒಂದು ಗೊಜಿಗೆ ಹೋಗದೆ. ಏಕೆಂದರೆ ನಾವು ಅಧಿಕಾರವನ್ನು ವಹಿಸಿಕೊಂಡು ಬರೇ ಏಳು ತಿಂಗಳು ಆಯಿತು, ಸೂಕ್ತವಾದ ಸಲಹೆ, ಸೂಚನೆಗಳನ್ನು ಕೊಟ್ಟು ಕೆಲವೊಂದು ನ್ಯೂನತೆಗಳಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕೆನ್ನುವ ರೀತಿಯಲ್ಲಿ ನಮ್ಮ ಗಮನ ಸೆಳೆದಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ನಮ್ಮ ಭಾಗದ ಶಾಸಕರೂ ಯಾವಾಗಲೂ ಸಹಕರಿಸಿಯೇ ಮಾತನಾಡುತ್ತಾರೆ. ಅವರೆ ವಿರೋಧ ಪಕ್ಷದವರು ಈ ರೀತಿ ಸಹಕಾರ ಕೊಡುವುದಾದರೆ ಅದು ಅಪರೂಪದ ಸಂಗತಿ ಆ ನಿಟ್ಟಿನಲ್ಲಿ ನಾನು ಅವರಿಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸಿ, ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡಾಗ ತೀವ್ರ ಆರ್ಥಿಕ ಕೊರತೆಯನ್ನು ಅನುಭವಿಸುತ್ತಿದ್ದರೂ ಕೂಡ ಕೆಲವೊಂದು ಹೊಸ ಕಾರ್ಯಕ್ರಮಗಳಿಗೆ ಸ್ವಲ್ಪ ಹಣದ ವ್ಯವಸ್ಥೆಯನ್ನು ಮಾಡಿರುತ್ತೇವೆ. ಈ ವಿಚಾರವನ್ನು ಪ್ರಥಮವಾಗಿ ತಿಳಿಸಿ, ಮುಂದಕ್ಕೆ ಮಾನ್ಯ ಸದಸ್ಯರು ಹೇಳಿದ ಅಥವಾ ಮಾಡಿದಂಥ ಟೀಕೆ ಟಿಪ್ಪಣಿಗಳಿಗೆ ನಾನು ಉತ್ತರಿಸಲಿಕ್ಕೆ ಹೋಗುತ್ತೇನೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ಈ ಐ.ವಿ. ಫ್ಲುಯಿಡ್ ನಿನ್ನೆ ಬಹಳ ಚರ್ಚೆಗೆ ಬಳಗಾಗಿತ್ತು. ಈ ಒಂದು ಘಟಕವನ್ನು ಸಂಧಾರಿಸಲಿಕ್ಕೆ ಈ ವರ್ಷ ೧೮ ಲಕ್ಷ ರೂಪಾಯಿಗಳನ್ನು ಸರ್ಕಾರ ಒದಗಿಸಿದೆ. ಅದೇರೀತಿ ಆಂಬುಲೆನ್ಸ್‌ಗಳನ್ನು ಖರೀದಿ ಮಾಡಲಿಕ್ಕೆ ೧೭.೧೪ ಲಕ್ಷ, ರಕ್ತ ನಿಧಿ ಸ್ಥಾಪಿಸಲು ೭.೨ ಲಕ್ಷ ಎಕ್ಸರೇ ಉಪಕರಣಗಳಿಗೆ ೩೦.೩೮ ಲಕ್ಷ ಮತ್ತು ಆಪೆಕ್ಸ್ ನೆರವಿನಿಂದ ರಾಯಚೂರು ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿಗೆ ಒಂದು ಯೋಜನೆ ತಯಾರಾಗಿದೆ, ಅದಕ್ಕೆ ೭೧ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಅದೇರೀತಿ ವೈದ್ಯಕೀಯ ಶಿಕ್ಷಣ ಇಲಾಖೆಯ ಗ್ರಂಥಾಲಯ ಅಭಿವೃದ್ಧಿಗೆ ೧೦ ಲಕ್ಷ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ.

ಅದೇ ರೀತಿ ಯೋಜನೆ ಮತ್ತು ಯೋಜನೇತರ ಆಡಿಯಲ್ಲಿ ೫೦ ಕೋಟಿ ರೂಪಾಯಿಗಳನ್ನು ಅದಕ್ಕೆ ಒದಗಿಸಿದ್ದೇವೆ. ಇನ್ನು ಜಯದೇವ ಹೃದ್ರೋಗ ಸಂಸ್ಥೆ ಇವರು ತಮ್ಮದೇ ಆದ ಒಂದು ಸ್ವಂತ ಕಟ್ಟಡವನ್ನು ಸಾರ್ವಜನಿಕರ ನೆರವಿನಿಂದ ಕಟ್ಟಲು ಮುಂದೆ ಬಂದಿದ್ದಾರೆ. ಈಗಾಗಲೇ ಅದಕ್ಕೆ ಬೇಕಾದಷ್ಟು ಹಣವನ್ನು, ದೇಣಿಗೆಯನ್ನು ಸಾರ್ವಜನಿಕರು ಕೊಡುತ್ತಾ ಇದ್ದಾರೆ. ಮಾನ್ಯ ಸಿಂಧ್ಯಾರವರು ಈ ಮಾದರಿಯಲ್ಲಿ ರಾಜ್ಯದಲ್ಲಿ ಮಕ್ಕಳ ಆರೋಗ್ಯ ಸಂಸ್ಥೆ ಇಲ್ಲವೆಂದು ಹೇಳಿದ್ದಾರೆ. ಈಗಾಗಲೇ ನನಗೆ ತಿಳಿದಮಟ್ಟಿಗೆ ೩ ಎಕರೆ–ಜಾಗವನ್ನು ಮತ್ತು ೫೬ ಲಕ್ಷ ರೂಪಾಯಿ ದೇಣಿಗೆಯನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಗಿದೆ. ಈ ಒಂದು ಮಕ್ಕಳ ಆರೋಗ್ಯ ಸಂಸ್ಥೆಯನ್ನು ಸ್ಥಾಪನೆ ಮಾಡಲಿಕ್ಕೆ ಸರ್ಕಾರ ಬಹಳಷ್ಟು ಕಾತುರವಾಗಿದೆ. ಅದು ತಮ್ಮ ಬೇಡಿಕೆ ಕೂಡ ಆಗಿತ್ತು. ಅದನ್ನು ನಾವು ಮೊದಲೇ ತೀರ್ಮಾನ ಮಾಡಿದ್ದೆವು. ಮೊನ್ನೆ ಮಕ್ಕಳ ತಜ್ಞರ ಕನ್‌ವೆನ್‌ಷನ್ ಆದಾಗ ಮಕ್ಕಳ ತಜ್ಞರಾದ ಡಾ: ಬೆನಕಪ್ಪ ಅವರು ಈ ರೀತಿಯ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊತ್ತೇವೆಂದು ನನ್ನ ಹತ್ತಿರ ಹೇಳಿದರು. ಈಗಾಗಲೇ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಾವು ಇದಕ್ಕೆ ಅನುಮತಿ ಕೊಡ

ಬೇಕೆಂದು ಹೇಳಿದ್ದೇನೆ. ಅವರೂ ಕೂಡ ಒಪ್ಪಿದ್ದಾರೆ. ಈ ರೀತಿ ಔಷಧಿ ನಿಯಂತ್ರಣ ಇಲಾಖೆಗೆ ೧.೮೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಒಟ್ಟು ೧೪೨ ಡ್ರಗ್ಸ್ ಇನ್ಸ್‌ಪೆಕ್ಟರ್‌ಗಳಲ್ಲಿ ಬರೀ ೩೨ ಜನ ಮಾತ್ರ ಈಗ ಇದ್ದಾರೆ. ಮತ್ತೆ ನಮ್ಮ ಇಲಾಖೆಯಲ್ಲಿ ಸುಮಾರು ನಾಲ್ಕು ಸಾವಿರ ಸಿಬ್ಬಂದಿ ಕೊರತೆ ಇದೆ. ಆದರೆ ನಮ್ಮ ಅರ್ಥ ಸಚಿವರನ್ನು ನಾನು ಈ ನಿಟ್ಟಿನಲ್ಲಿ ಅಭಿನಂದಿಸಬೇಕಾಗಿದೆ. ಮೊನ್ನೆ ತಾನೆ ನಾನು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಹೋಗಿ ಅವರ ಹತ್ತಿರ ವಿಚಾರ ವಿನಿಮಯ ಮಾಡಿದ ಪ್ರಕಾರ, ಅವರು ಸಂತೋಷದಿಂದ ಈ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮಿತವ್ಯಯವನ್ನು ಸಡಿಲಗೊಳಿಸುತ್ತೇವೆಂದು ಹೇಳಿದ್ದಾರೆ. ಹಾಗಾಗಿ ನಾನಂ ತಮ್ಮೆಲ್ಲರ ಪರವಾಗಿ ಇವತ್ತು ಅವರನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ, ಈ ಆರೋಗ್ಯ ಇಲಾಖೆಯಲ್ಲಿ ವೈದ್ಯರುಗಳು ಇಲ್ಲವೆಂಬ ಬಹಳಷ್ಟು ಟೀಕೆಗಳನ್ನು ಎದುರಿಸಿದ್ದೇನೆ, ಕೇಳಿದ್ದೇನೆ. ಆದಕ್ಕೆ ಸಮಂಜಸವಾಗಿ ಈ ಒಂದು ನಿಟ್ಟಿನಲ್ಲಿ ಅರ್ಥ ಸಚಿವರು ಬಹಳಷ್ಟು ದೊಡ್ಡ ಉಪಕಾರ ಮಾಡಿದ್ದಾರೆ. ಇಷ್ಟೊಂದು ಹಣದ ಕೊರತೆ ಇದ್ದರೂ ಕೂಡ ಅವರು ಒಪ್ಪಿಗೆ ನೀಡಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾದ್ದು ನನ್ನ ಆದ್ಯ ಕರ್ತವ್ಯ. ಅದೇ ರೀತಿ ಕೆಲವು ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ವೆಗಾನ್ ಆಸ್ಪತ್ರೆ, ಹುಬ್ಬಳ್ಳಿ, ದಾವಣಗೆರೆ ವಿಕ್ಟೋರಿಯಾ ಮುಂತಾದ ಆಸ್ಪತ್ರೆಗಳ ಕಟ್ಟಡಗಳು ನೂರು ವರ್ಷಗಳ ಹಿಂದಿನ ಕಟ್ಟಡಗಳಾಗಿದ್ದು ಇವುಗಳ ನವೀಕರಣಕ್ಕೆ ಹಣದ ಸೌಲಭ್ಯ ಬೇಕು ಆದರೆ ಆರ್ಥಿಕ ಸೌಲಭ್ಯವನ್ನು ಹೊಂದಿಕೊಂಡು ಬಜೆಟ್ ಪ್ರಾವಿಜನ್ ನೋಡಿಕೊಂಡು ನಾವು ಮುಂದಕ್ಕೆ ಹಂತಹಂತವಾಗಿ ಈ ಕಾರ್ಯವನ್ನು ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ. ನಮ್ಮ ಆಸ್ಪತ್ರೆಗಳಲ್ಲಿ ಧರ್ಮ ಶಾಲೆಗಳನ್ನು ಸ್ಥಾಪಿಸಬೇಕು ಎಂಬುದರ ಬಗ್ಗೆ ಮಾನ್ಯ ಸಿಂಧ್ಯರವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಕಿವ್ಮಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಈ ರೀತಿಯ ಒಂದು ಧರ್ಮ ಶಾಲೆ ಇರುವುದನ್ನು ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ. ಅದು ಒಳ್ಳೆಯ ರೀತಿಯಿಂದ ನಡೆಯುತ್ತಿದೆ. ಎಷ್ಟೋ ಕಡೆಗಳಲ್ಲಿ ನಾನು ಅಕಸ್ಮಿಕ ಭೇಟಿಗಳನ್ನು ಮಾಡಿದಾಗ ಅಲ್ಲಿನ ನೈರ್ಮಲ್ಯದ ಬಗ್ಗೆ ಸ್ವತಃ ನಾನು ಕಂಡಿದ್ದೇನೆ. ಅದು ಅಷ್ಟು ಸಮಂಜಸವಾಗಿಲ್ಲ.

(ಸನ್ಮಾನ್ಯ ಉಪಾಧ್ಯಕ್ಷಣಿಯವರು ಪೀಠವನ್ನು ಅಲಂಕರಿಸಿದರು)

ಇದಕ್ಕೆ ಕಾರಣ ಉಂಟು. ರೋಗಗಳ ಜೊತೆ ರೋಗಿಗಳನ್ನು ನೋಡಿಕೊಳ್ಳಲಿಕ್ಕೆ ಬರತಕ್ಕ ಜನರು ಉಳಿದುಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲದೆ ಇರುವುದರಿಂದ ಅವರು ಆಸ್ಪತ್ರೆಯ ಕಾರಿಡಾರ್‌ನಲ್ಲಿ ಊಟ ಮಾಡುವುದು, ಟಾಯಿಲೆಟ್ ಉಪಯೋಗ ಮಾಡಿಕೊಳ್ಳುವುದು ನಡೆಯುತ್ತಿದೆ. ಇದರಿಂದ ನೈರ್ಮಲ್ಯವನ್ನು ಕಾಪಾಡಲು ಸಾಧ್ಯವಾಗುತ್ತಿಲ್ಲ. ಯಾರಾದರೂ ದೊಡ್ಡ ದೊಡ್ಡ ದಾನಿಗಳು, ಹಣವಂತರು, ಶ್ರೀಮಂತರು, ಮುಂದೆ ಬಂದರೆ ಸಾರ್ವಜನಿಕ ನೆರವಿನಿಂದ ಹಂತಹಂತವಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಈ ಧರ್ಮ ಶಾಲೆಗಳನ್ನು ಪ್ರಾರಂಭ ಮಾಡಬಹುದು. ಎಲ್ಲಾ ಆಸ್ಪತ್ರೆಗಳಲ್ಲೂ ಈ ವರ್ಷವೇ ಧರ್ಮ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈ ವರ್ಷ ಪ್ರಾರಂಭ ಮಾಡುತ್ತೇವೆ. ಅದೇ ರೀತಿ ಬೇರೆ ಕಡೆಗಳಲ್ಲಿ ದಾನಿಗಳು ಮುಂದೆ ಬಂದರೆ ಅಂತಹ ಆಸ್ಪತ್ರೆಗಳ ಆವರಣದಲ್ಲಿ ಧರ್ಮ ಶಾಲೆಯನ್ನು ಸ್ಥಾಪನೆ ಮಾಡಲು ಪ್ರಯತ್ನವನ್ನು ಮಾಡುತ್ತಾ ಇದ್ದೇವೆ ಇದರಿಂದ ನೈರ್ಮಲ್ಯವನ್ನು ಕಾಪಾಡಲು ಸಹ ಅನುಕೂಲವಾಗುತ್ತದೆ. ಈಗಾಗಲೇ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸುಮಾರು ೧೦೦ ಹಾಸಿಗೆಗಳ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯವನ್ನು ನೀಡಲಾಗಿದೆ ಹಾಗೂ ಮಧುಗಿರಿಯಲ್ಲಿ ೫೦ ಹಾಸಿಗೆಗಳ ಕಟ್ಟಡಕ್ಕೆ ಮಂಜೂರಾತಿ ನೀಡಿದೆ. ಇವು ಇತ್ತೀಚಿನ ಕೆಲವು ಬೆಳವಣಿಗೆಗಳು. ಶ್ರೀಮಾನ್ ಸಿಂಧ್ಯರವರು ಮಾತನಾಡುತ್ತಾ ಹೇಳಿದರು.

ಮುಖ್ಯವಾಗಿ ಮನುಷ್ಯರಿಗೆ ಆರೋಗ್ಯ ಸಿಕ್ಕಬೇಕಾದರೆ, ಪ್ರಕೃತಿಯ ನೆರವೂ ಕೂಡ ಬೇಕು ಒಳ್ಳೆಯ ಆಹಾರ, ಶುದ್ಧವಾದ ಕುಡಿಯುವ ನೀರು, ಒಳ್ಳೆಯ ಗಾಳಿ, ಬೆಳಕು, ಎಲ್ಲಾ ಇದ್ದರೆ, ಒಳ್ಳೆಯದು ಎಂದು ಹೇಳಿದರು. ಇದನ್ನು ನಾನು ಕೂಡ ಒಪ್ಪುತ್ತೇನೆ. ಈಗಾಗಲೇ ಕೇಂದ್ರಸರ್ಕಾರ ಹಲವಾರು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿ, ಅದಷ್ಟು ಗ್ರಾಮೀಣ ಜನರಿಗೆ ಆರೋಗ್ಯ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದರೂ ಕೂಡ, ಇನ್ನೂ ಆನಾರೋಗ್ಯ ತಾಂಡವವಾಡುತ್ತಿದೆ. ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ೩೫ ಕೋಟಿ ಜನಸಂಖ್ಯೆ ಇತ್ತು. ಇವತ್ತು ೮೦ ಕೋಟಿಗೂ ಮೀರಿದೆ. ಇಷ್ಟೊಂದು ಜನಸಂಖ್ಯೆ ಸ್ಫೋಟನ್ನು ನಿಯಂತ್ರಣ ಮಾಡದೇ ಹೋದರೆ, ಬಹುಶಃ ಯಾವ ಕಾರ್ಯಕ್ರಮ ಹಾಕಿಕೊಂಡರೂ ಜನರಿಗೆ ಆರೋಗ್ಯ ಕೊಡುವುದು ಕನಸಿನ ಮಾತಾಗಿ ಉಳಿಯುತ್ತದೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ ಎಂದು ನಾನು ಭಾವಿಸುತ್ತೇನೆ. ಈಗಲೂ ನಮ್ಮ ಹಳ್ಳಿಗಳಲ್ಲಿ ಸ್ಯಾನಿಟೇಷನ್ ಇಲ್ಲವೇ ಇಲ್ಲ. ಜನಗಳು ಎಲ್ಲೆಂದರಲ್ಲಿ ಹೋಗಿ ಮಲವಿಸರ್ಜನೆ

ಮಾಡುತ್ತಾರೆ ಇದರಿಂದ ಗ್ರಾಮೀಣ ಜನರಿಗೆ ಮತ್ತು ಮಕ್ಕಳಿಗೆ ಖಾಯಿಲೆ ಬರುವುದು ಸ್ವಾಭಾವಿಕ. ಮೊದಲು ಹಳ್ಳಿಗಳಲ್ಲಿ ಮನೆ ಮದ್ದು ಅಥವಾ ಆಜ್ಜಿ ಮದ್ದು ಎಂದು ಕೊಡುತ್ತಿದ್ದರು ಎಂದು ಅವರು ಹೇಳಿದರು. ಇವತ್ತು ಜನರಿಗೆ ಸುಲಭದಲ್ಲಿ ಮದ್ದು ಸಿಗಬೇಕು, ಬೇಗ ಕಾಯಿಲೆ ಗುಣ ಆಗಬೇಕು. ಶೀತಕ್ಕೆ, ಜ್ವರಕ್ಕೆ ಹಿಂದಿನ ಕಾಲದಲ್ಲಿ ಆಸ್ಪತ್ರೆಗೆ ಹೋಗುತ್ತಿರಲಿಲ್ಲ ನಾನೂ ಕೂಡ ಒಂದು ದಿವಸ ಆಸ್ಪತ್ರೆಗೆ ಹೋಗುವುದಿಲ್ಲ. ಒಂದು ಸ್ವಲ್ಪ ಶೀತವಾದರೆ, ಈರುಳ್ಳಿ ರಸವನ್ನು ಜೇನುತುಪ್ಪದಲ್ಲಿ ಬೆರೆಸಿ ತೆಗೆದುಕೊಂಡರೆ ವಾಸಿಯಾಗುತ್ತಿತ್ತು. ಅದೇ ರೀತಿ ಜಾಂಡೀಸ್, ಇದಕ್ಕೂ ಕೂಡ ಹಳ್ಳಿ ಮದ್ದು ಎಂದು ನೆಲನೆಲ್ಲಿಕಾಯಿಯನ್ನು ಹಸುವಿನ ಹಾಲಿನಲ್ಲಿ ಅರೆದು ಜೀರಿಗೆ ಹಾಕಿ ಕುಡಿದರೆ, ಮೂರು ದಿವಸದಲ್ಲಿ ನಿವಾರಣೆಯಾಗುತ್ತಿತ್ತು. ಇವತ್ತು ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಕೊಡುತ್ತಾ ಹೋಗಿ, "ಹಿತ್ತಲ ಗಿಡಮದ್ದಲ್ಲ'' ಎಂಬ ಗಾದೆಯು ಮಾತಿನಂತೆ ಹಿಂಎನದನ್ನು ಮರೆಯುತ್ತಾ ಬರುತ್ತಿದ್ದೇವೆ. ಹಿಂದೆ ಬಾರ್‌ಕೂರಿನಲ್ಲಿ ರಾಮನ್ ನಂಬಿಯಾರ್ ಎಂಬ ಆಯುರ್ವೇದ ವೈದ್ಯರು ಇದ್ದರು. ಇವರು ನಾಡಿ ಪರೀಕ್ಷೆ ಮಾಡಿ ಮನುಷ್ಯನ ದೇಹದಲ್ಲಿ ಏನು ಕಾಯಿಲೆ ಇದೆಯೆಂದು ಹೇಳುತ್ತಿದ್ದರು. ಇವರ ಹತ್ತಿರ ಬಹಳಷ್ಟು ಕಡೆಯಿಂದ ಜನರು ಬರುತ್ತಿದ್ದರು. ಇವರ ಮದ್ದಿನ ಪ್ರಭಾವ ಹಾಗೂ ಜನ ಗುಣಮುಖ ರಾಗುವುದನ್ನು ನೋಡಿ, ಹಲವಾರು ಕಡೆಗಳಿಂದ ಜನ ಬರುತ್ತಿದ್ದರು. ಇವರು ತಮ್ಮ ಅಶೀತಿ ವಯಸ್ಸಿನ ಪ್ರಾಯದಲ್ಲಿ ತೀರಿಕೊಂಡರು. ಆದರೆ ಇವರು, ಅವರ ಮಕ್ಕಳು, ಮೊಮ್ಮಕ್ಕಳಿಗೆ ಯಾವರೀತಿ ನಾಡಿ ಪರೀಕ್ಷೆ ಮಾಡಬೇಕು ಎಂಬುದನ್ನು ಕಲಿಸಿ ಕೊಡಲಿಲ್ಲ. ಇದು ನಮ್ಮ ದೌರ್ಭಾಗ್ಯ ಎಂದು ಹೇಳ ಬೇಕಾಗುತ್ತದೆ. ಏಕೆಂದರೆ, ಯಾರಾದರೂ ಕಲಿತುಕೊಂಡರೆ ಅನುಕೂಲವಾಗುತ್ತದೆಂದು ತಮ್ಮ ಈ ಕೊಡುಗೆಯನ್ನು ಜಗತ್ತಿಗೆ ಬಿಟ್ಟುಹೋಗದೆ, ತಮ್ಮೊಟ್ಟಿಗೆ ಕೊಂಡು ಹೋಗಿರುತ್ತಾರೆ. ಹೀಗಾಗಿ ಭಾರತೀಯ ವೈದ್ಯಪದ್ಧತಿ ಇವತ್ತು ನಶಿಸಿ ಹೋಗಲಿಕ್ಕೆ ಕಾರಣವಾಗಿದೆ. ಆದರೂ ಇವತ್ತು ನಮ್ಮ ತಜ್ಞರು ಅದರಲ್ಲಿ ಹೆಚ್ಚಿನ ಮಾಹಿತಿ ಪಡೆದು, ರೀಸರ್ಚ್ ಮಾಡಿ, ಜನರ ಕಾಯಿಲೆಯನ್ನು ಗುಣಪಡಿಸುವುದರಲ್ಲಿ ಮದ್ದು ತಯಾರಿಸುವುದರಲ್ಲಿ ಸಫಲರಾಗಿದ್ದಾರೆ ಮತ್ತು ಮದ್ದು ತಯಾರಿಸುತ್ತಿದ್ದಾರೆ ಆಮೇಲೆ ಅವರು ಅಲೋಪಥಿಕ್ ಮೆಡಿಸಿನ್ ಬಗ್ಗೆ ಹೇಳುತ್ತಾ, ವಿಷವನ್ನು ಕೊಡುತ್ತಾರೆಂದು ಹೇಳಿದರು. ಇತ್ತೀಚೆಗೆ ನಾನು ಮಂತ್ರಿಯಾದ ಮೇಲೆ ಮಂಗಳೂರಿನಲ್ಲಿ ಒಬ್ಬ ದೊಡ್ಡ ತಜ್ಞ ವೈದ್ಯರು ಹೇಳಿದರು. ಹೀಗಿಯೇ ಭಾಷಣದಲ್ಲಿ ಮಾತನಾಡುತ್ತಾ, ಮಂತ್ರಿಗಳೇ, ನೀವು ಮದ್ದಿಲ್ಲ, ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲವೆಂದು ಬೇಜಾರು ಮಾಡಬೇಡಿ, ಮದ್ದು ಇಲ್ಲವೇ ಇರುವುದೇ ಒಳ್ಳೆಯದು. ಏಕೆಂದರೆ, ಅದು ಬಾದು ರೀತಿಯು ಸ್ಲೋ ಪಾಯಿಸನ್ ಇದ್ದಹಾಗೆ, ಹಾಗಿರುವಾಗ, ಮದ್ದು ಕೊಡದೇ ಇದ್ದರೆ ಜನರು ಬದುಕುತ್ತಾರೆ. ಮದ್ದು ಕೊಟ್ಟರೆ ಜನರು ಸಾಯುತ್ತಾರೆ. ಇಂತಹ ಪರಿಸ್ಥಿತಿ ಇದೆ. ಏಕೆಂದರೆ, ಇವತ್ತು ಕಲಬೆರಕೆ ಎಂಬುದು ಬಂದು, ಜಗತ್ತಿನಲ್ಲಿ ಕೆಲವರು ತಮ್ಮ ಜೀವನದಲ್ಲಿ ಜಿಗುಪ್ಸೆ ಬಂದು ಸಾಯುವುದಕ್ಕೆ ಎಂತು ವಿಷ ತೆಗೆದುಕೊಂಡರೂ ಸಾಯುವುದಿಲ್ಲ. ಏಕೆಂದರೆ, ಅವರಲ್ಲೂ ಅಡಲ್ಟರೇಷನ್. ಈ ರೀತಿಯು ಕಲಬೆರಕೆಯು ವಸ್ತುಗಳನ್ನು ನಾವು ತಿನ್ನುತ್ತಾ ಇದ್ದೇವೆ. ಈ ಜಗತ್ತಿನಲ್ಲಿ ಅವರಲ್ಲೂ ಕೂಡ ಮುಖ್ಯವಾಗಿ ನಮ್ಮ ದೇಶದಲ್ಲಿ ರಾತ್ರಿ ಹಗಲಾಗುವುದರೊಳಗೆ ನಮಗೆ ಶ್ರೀಮಂತಿಕೆ ಬರಬೇಕು, ನಾವು ಏನಾದರೊಂದು ಎಕ್ಸ್‌ಪೋರ್ಟ್ ಮಾಡುವುದಾದರೂ ಅದಕ್ಕೆ ಒಂದು ಸ್ಯಾಂಪಲ್ ಕಳುಹಿಸುವುದು, ಆದರೆ ನಾವು ಕೊಡುವುದೇ ಬೇರೆ ಈ ರೀತಿಯು ಪರಿಸ್ಥಿತಿಯಲ್ಲಿರುವಾಗ, ನಾವಾದರೂ ಜನರ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈ ನಿಟ್ಟಿನಲ್ಲಿ ನಾನು ನಿಜವಾಗಿಯೂ ಹೇಳುತ್ತೇನೆ. ಪ್ರತಿಯೊಬ್ಬ ಪ್ರಜೆಯೂ ಕೂಡ ಪ್ರಾಮಾಣಿಕ ಪ್ರಶ್ನೆಯನ್ನು ತನಗೆತಾನೆ ಹಾಕಿಕೊಳ್ಳ ಬೇಕಾಗುತ್ತದೆ.

ಈ ಮದ್ದು ತಯಾರಿಸುವವರಾಗಲಿ, ಯಾರೇ ಆಗಲಿ ತಮಗೆ ತಾವೇ ಪ್ರಶ್ನೆ ಹಾಕಿಕೊಳ್ಳಬೇಕು. ಇಂತಹ ಸಮಸ್ಯೆ ಇರುವಾಗ ನಾವು ಮದ್ದುಕೊಟ್ಟರೂ ಒಂದೇ ಕೊಡದಿದ್ದರೂ ಒಂದೇ ಒಂದು ಕಾಯಿಲೆಗೆ ಒಂದು ಮದ್ದುಕೊಟ್ಟರೆ ಅದರಿಂದ ಹತ್ತು ಪರಿಣಾಮಗಳು ಬೇರೆ ರೀತಿ ಆಗಿ ವಿಪರ್ಯಾಸವಾಗುತ್ತದೆ. ಇಂತಹದರಲ್ಲಿ ಆದಷ್ಟು ಎಷ್ಟು ಕಡಿಮೆ ಮದ್ದು ತೆಗೆದುಕೊಳ್ಳುತ್ತೇವೊ ಅಷ್ಟು ಆರೋಗ್ಯಕ್ಕೆ ಕ್ಷೇಮ ಎಂದು ನನ್ನ ಭಾವನೆ. ಹಾಗೆಂದ ಮಾತ್ರಕ್ಕೆ ಮದ್ದನ್ನು ಸರಬರಾಜು ಮಾಡುವುದಕ್ಕೆ, ಔಷಧಿ ಸರಬರಾಜು ಮಾಡುವುದಕ್ಕೆ ಖಂಡಿತ ನಾವು ಹಿಂಜರಿಯುವುದಿಲ್ಲ. ಏತಕ್ಕೆ ಹೇಳುತ್ತೇನೆ ಎಂದರೆ ಸಣ್ಣಸಣ್ಣ ಕಾಯಿಲೆ ಇರುವಾಗ ಸುಲಭವಾಗಿ ಸಿಗುವ ಮದ್ದುಗಳನ್ನು ಉಪಯೋಗಿಸಬೇಕು. ದೊಡ್ಡ ದೊಡ್ಡ ಕಾಯಿಲೆ ಬಂದರೆ, ಶಸ್ತ್ರ ಚಿಕಿತ್ಸೆ ಆಗಬೇಕೆಂದರೆ ಆಗ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಹೋಗಿ ಸಾಮಾನ್ಯವಾಗಿ ಸಣ್ಣ ಸಣ್ಣ ಕಾಯಿಲೆಗೆ ಕೂಡಾ ಆಸ್ಪತ್ರೆಗಳಿಗೆ ಹೋಗುತ್ತಾರೆ. ನಾವು ಬೆಳಿಗ್ಗೆ ಹೊತ್ತು ಆಸ್ಪತ್ರೆಗಳಿಗೆ ಹೋದರೆ, ಅಲ್ಲಿ ಜನರು ಸಣ್ಣಪುಟ್ಟ ಕಾಯಿಲೆಗೆ ಕೂಡಾ ಬಾಟಿಲ್ ಹಿಡಿಮುಕೊಂಡು ಕಾಳಿತು ಕೊಂಡಿರುವುದನ್ನು ನೋಡಬಹುದು. ಏಕೆಂದರೆ ಉದಾಸೀನ ಮನೆಯಲ್ಲಿ ಮದ್ದು ಮಾಡುವುದಕ್ಕೆ

ಯಾರಿಗೂ ಬೆನ್ನು ಬಗ್ಗುವುದಿಲ್ಲ. ನಾನು ವೈಯಕ್ತಿಕವಾಗಿ ಹೇಳುವುದು ಇದ್ದರೆ, ಇದಕ್ಕೆ ಬಹಳಷ್ಟು ವಿರೋಧವನ್ನು ನಾನು ವ್ಯಕ್ತಪಡಿಸುತ್ತೇನೆ. ಅಲೋಪಥಿಕ್ ಮೆಡಿಸಿನ್ಸ್‌ಗೆ ಬಹಳಷ್ಟು ಸಹಕಾರ ಕೊಡ ಬಾರದು. ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಕೂಡ ಬಹಳ ಪರಿಣಾಮಕಾರಿ ಯಾಗಿ ಕೆಲಸ ಮಾಡುವುದು ಉಂಟು. ನಮ್ಮ ಮಾಜಿ ಆರೋಗ್ಯ ಸಚಿವರು ಹೇಳಿದರು. ಈ ಇಲಾಖೆ ಯಲ್ಲಿ ನಾನು ೧೮ ತಿಂಗಳು ಮಂತ್ರಿಯಾಗಿದ್ದರೂ ನಾನು ಹೊರಗೆ ಹೋದಮೇಲೆ ಇಲ್ಲಿಯು ಕೆಲವೊಂದು ವಿಚಾರಗಳು ನನಗೆ ತಿಳಿಯಿತು ಎಂದು ಹೇಳಿದರು. ನಾನು ಬಂದು ಇನ್ನೂ ೭ ತಿಂಗಳು ಆಗಿದೆ. ತಮಗೆ ಏನಾದರೂ ಗೊತ್ತಿದ್ದರೆ ಹೇಳಿ. ನಮ್ಮ ಇಲಾಖೆಯಲ್ಲಿ ಅವ್ಯವಹಾರಗಳು, ಹಗರಣಗಳು ಇದ್ದರೆ ನನಗೆ ಹೇಳಿ. ನಿಜವಾಗಿಯೂ ನಾವು ಇವತ್ತು ಪತ್ರಿಕೆಗಳನ್ನು ಅಭಿನಂದಿಸಬೇಕಾಗಿದೆ, ಅವರಾದರೂ ಇವುಗಳನ್ನು ನಮ್ಮ ಗಮನಕ್ಕೆ ತಂದರೆ. ಈ ನಿಟ್ಟಿನಲ್ಲಿ ಕಾರ್ಯಕ್ರಮ ತೆಗೆದುಕೊಳ್ಳ ಬಹುದು ಇಲ್ಲದಿದ್ದರೆ ನೇರವಾಗಿ ನಮಗೆ ತಿಳಿಯುವ ಪ್ರಮೇಯವೇ ಇರುವುದಿಲ್ಲ. ಈ ಇಲಾಖೆಯಲ್ಲಿ ೫೦ ಸಾವಿರಕ್ಕಿಂತ ಜಾಸ್ತಿ ಸಿಬ್ಬಂದಿ ಇರುವುದರಿಂದ ಯಾರು ಏನು ಮಾಡುತ್ತಾರೆಂದು ಪತ್ತೆ ಹಿಡಿಯುವುದಕ್ಕೆ ಸಾಧ್ಯ ಇರುವುದಿಲ್ಲ. ಆದರೆ ಎಲ್ಲಾದರೂ ಸಿಕ್ಕಿಬಿದ್ದರೆ ಯಾರಿಗೂ ದಾಕ್ಷಿಣ್ಯ ತೋರಿಸದೆ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅವರೇನಾದರೂ ಅಪೀಲ್ ಟ್ರಿಬ್ಯೂನಲ್‌ಗೆ ಹೋಗಿ, ಅಲ್ಲೂ ಕೂಡಾ ಪ್ರತಿಪಾದಿಸಿ, ಅಲ್ಲೂ ಕೂಡ ಅವರು ತಪ್ಪಿತಸ್ಥರು ಎಂದು ಸಾಬೀತಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಯಾರಿಗೂ ದಾಕ್ಷಿಣ್ಯ ಇಲ್ಲ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ದಯವಿಟ್ಟು ನನ್ನಮೇಲೆ ವಿಶ್ವಾಸ ಇರಿಸಬೇಕು ನಿನ್ನೆ ತಾನೆ ಹೇಳಿದ ಹಾಗೆ, ನಾನು ನನಗೆ ವಹಿಸಿಕೊಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವಂಥ ಒಂದು ಮನೋಭಾವ ಉಳ್ಳವಳು. ಇದಕ್ಕೆ ತಮ್ಮೆಲ್ಲರ ಸಹಕಾರ ಕೋರುತ್ತಾ, ಇದ್ದೇನೆ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಮಾನ್ಯ ಅಧ್ಯಕ್ಷರೇ, ನಮ್ಮ ಪ್ರಪಂಚ ಬಹಳ ವಿಚಿತ್ರವಾದುದು. ಕೆಲವರು ತೀರಾ ಬಡವರಿ ಹೊಟ್ಟೆಗಿಲ್ಲದೆ ಕಾಯಿಲೆ. ಶ್ರೀಮಂತರಿಗೆ ಹೊಟ್ಟೆಗೆ ಜಾಸ್ತಿಯಾಗಿ ಕಾಯಿಲೆ ಅಂದರೆ ಹಣ ಜಾಸ್ತಿ ಯಾದರೂ ಕಾಯಿಲೆ ಬರುತ್ತದೆ. ಮಧ್ಯಮವರ್ಗದವರಿಗೆ ಹಣ ಜಾಸ್ತಿ ಇಲ್ಲ, ಬಡತನವೂ ಇಲ್ಲ, ಒಳ್ಳೆಯ ರೀತಿಯಲ್ಲಿ ಅವರು ಇದ್ದಾರೆ. ನಮ್ಮ ಆಹಾರದ ಅಭ್ಯಾಸದಲ್ಲಿ ಕೂಡಾ ಇತಿಮಿತಿ ಇದ್ದರೆ, ಖಂಡಿತವಾಗಿ ನಾವು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯ ಉಂಟು. ಉದಾಹರಣೆಗೆ ಬಂಗಾರಪ್ಪನವರು ಹೇಗೆ ತಮ್ಮ ಆರೋಗ್ಯವನ್ನು ಇಟ್ಟುಕೊಂಡಿದ್ದಾರೆ. ಅದೇರೀತಿ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಹೇಗೆ ತೆಳ್ಳಗೆ ಇದ್ದಾರೆ. ಸಿದ್ಧಾರ್ಥರವರು ನಾನು ಕಾಯಿಲೆ ಬಿದ್ದಿದ್ದೆ ಎಂದು ಹೇಳಿದರು. ದೇಹ ತೆಳ್ಳಗೆ ಇದ್ದರೆ ಖಂಡಿತಾ ಕಾಯಿಲೆ ಬರುವುದಿಲ್ಲ. ನಿವು ಈ ಸಣ್ಣ ಪ್ರಾಯಕ್ಕೆ ಈ ರೀತಿ ದಪ್ಪಗೆ ಇರುವುದು ಒಳ್ಳೆಯದಲ್ಲ. ಹಾಗಿರುವಾಗ ಯೋಗಾಭ್ಯಾಸದ ಬಗ್ಗೆ ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟಿದ್ದಾರೆ. ನಿಜವಾಗಿಯೂ ಬಂಗಾರಪ್ಪನವರು ಯೋಗ ಮಾಡುತ್ತಾರೆ. ಚಿಕ್ಕಮಕ್ಕಳು ಏನೇನು ಆಟ ಆಡುತ್ತಾರೆ, ಏನು ಮಾಡುತ್ತಾರೆ, ಅವೆಲ್ಲವನ್ನೂ ಅವರು ಮಾಡುತ್ತಾರೆ. ಇತ್ತೀಚೆಗೆ ನಮ್ಮ ಕೆಲವು ಶಾಸಕರುಗಳು ನನ್ನನ್ನು ಒಂದು ಯೋಗಾಭ್ಯಾಸ ಕೇಂದ್ರದ ಉದ್ಘಾಟನೆಗೆ ಕರೆದುಕೊಂಡು ಹೋದರು.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಿ ಚಿಕ್ಕಚಿಕ್ಕ ಹುಡುಗರು ಮಾಡುವುದೆಲ್ಲಾ ಮಾಡುತ್ತಾರೆ ಎಂದು ಹೇಳಿದರು. ಸಧ್ಯ ಯಾವುದು ಎಂದು ಹೇಳಲಿಲ್ಲ ನಾನು ಬಚಾವಾದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇದೆಲ್ಲಾ ನೆನೆಸಿಕೊಂಡರೆ ನಗೆ ಬರುತ್ತದೆ.

ಉಪಾಧ್ಯಕ್ಷಣಿಯರು.—ಭಾಷಣ ಮಾಡುವಾಗ ನಗು ಬಂದರೆ ಏನು ಮಾಡಬೇಕು.

ಶ್ರೀಮತಿ ಮನೋರಮಾ ಮಂಧ್ವರಾಜ್.—ಮತ್ತೆ ಯೋಗಾಭ್ಯಾಸದ ಬಗ್ಗೆ ಹೇಳಿದ್ದಾರೆ. ಯೋಗಾಭ್ಯಾಸದಿಂದ ಹಲವಾರು ಕಾಯಿಲೆಗಳು ಬಾರದಹಾಗೆ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ.

೧೨–೦೫ ಪಿ.ಎಂ.

ಒಂದು ವೇಳೆ ಬಂದರೂ ಆದನ್ನು ನಿವಾರಣೆ ಮಾಡುವುದಕ್ಕೂ ಸಾಧ್ಯ ಇದೆ. ನಾನು ನಮ್ಮ ವಿದ್ಯಾ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಅವರು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಈ ಯೋಗಾಭ್ಯಾಸವನ್ನು ಕಲಿಸುವುದಕ್ಕೆ ಒಂದು ಸಬ್ಜೆಕ್ಟ್ ಆಗಿ ಇಡುವುದು ಒಳ್ಳೆಯದು ಎಂದು ಕೇಳಿ ಕೊಳ್ಳುತ್ತೇನೆ ನಾನು ಅವರ ಜೊತೆಯಲ್ಲಿ ಈ ವಿಚಾರದಲ್ಲಿ ಮಾತನಾಡುವುದಕ್ಕೂ ಸಹ ಇಷ್ಟಪಡುತ್ತೇನೆ ನಮ್ಮ ಮಾನ್ಯ ವಿದ್ಯಾ ಸಚಿವರು ಇಲ್ಲ. ಇನ್ನು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಯೋಗ ಕೇಂದ್ರಗಳು

ಇವೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಬಸವರಾಜು ಮತ್ತು ರಮಾನಾಥ ರೈಗಳವರು ನಮ್ಮ ಮಂಗಳೂರಿನಲ್ಲಿ ಎರಡು ಯೋಗ ಕೇಂದ್ರಗಳನ್ನು ಉದ್ಘಾಟನೆ ಮಾಡಲು ನನ್ನನ್ನು ಕರೆದುಕೊಂಡು ಹೋಗಿದ್ದರು ಅಲ್ಲಿ ಇವರಿಬ್ಬರನ್ನು ಬಿಟ್ಟು ಉಳಿದವರೆಲ್ಲರೂ ಹೊಟ್ಟೆ ಚಿಕ್ಕದಾಗಿತ್ತು ಇವರು ಮಾತ್ರ ದೊಡ್ಡ ಹೊಟ್ಟೆ ಬೆಳೆಸಿಕೊಂಡಿದ್ದರು ಇವರಿಬ್ಬರ ಹೊಟ್ಟೆಗಳು ಟಿ.ವಿಯಲ್ಲಿ ಬಂದಿದೆಯಂತೆ ನಾನು ಅಲ್ಲಿ ಉದ್ಘಾಟನೆ ಮಾಡಿದ ಮೇಲೆ ಈ ಸಮಾರಂಭ ಮರು ದಿವಸ ಟಿ.ವಿ.ಯಲ್ಲಿ ಬಂತು ಎಂದು ಶ್ರೀ ರಮಾನಾಥರೈ ಅವರು ನನಗೆ ಹೇಳಿದರು ನಮ್ಮದೆಲ್ಲಾ ಫೋಟೊ ಬಂದಿದೆಯೆಂದು ಹೇಳಿದರು ಆಗ ನಾನು ಏನು ಬಂತು ಎಂದು ಕೇಳಿದ್ದಕ್ಕೆ ನಮ್ಮ ಹೊಟ್ಟೆ ಟಿ.ವಿ.ಯಲ್ಲಿ ಬಂದಿದೆ ಎಂದು ಹೇಳಿದರು ಆಗ ನಿಮಗೆ ನಾಚಿಕೆ ಇಲ್ಲವೆ ನೀವು ಯೋಗಕ್ಕೆ ಹೋಗಿ ಏನು ಮಾಡಿದಿರಿ ಎಂದು ನಾನು ಕೇಳಿದೆ ಉದಾಹರಣೆಗೆ ಹೇಳುವುದಾದರೆ, ನಮ್ಮ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿಯವರು. ಅವರನ್ನು ನೋಡಿ ಈ ವಯಸ್ಸಿನಲ್ಲೂ ಅವರು ಆರೋಗ್ಯವನ್ನು ಹೇಗೆ ಇಟ್ಟುಕೊಂಡಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ.—ಅವರ ಆರೋಗ್ಯದ ಗುಟ್ಟೇ ಬೇರೆ ಆ ರೀತಿ ಆರೋಗ್ಯ ಕೋಟಯಲ್ಲಿ ಒಬ್ಬರಿಗೋ ಲಕ್ಷದಲ್ಲಿ ಒಬ್ಬರಿಗೋ ಇರುವಂಥಾದ್ದು ಎಲ್ಲರಿಗೂ ಇರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರ ಆರೋಗ್ಯದ ಗುಟ್ಟು ಒಂದು ಸಾರಿ ಬಹಿರಂಗಪಟ್ಟಿದೆ. ಇನ್ನೊಂದು ಸಾರಿ ಏನಾದರೂ ಇಲ್ಲಿ ಬಹಿರಂಗವಾಗಿಬಿಟ್ಟರೆ ಅನೇಕ ಜನರಿಗೆ ಬಹಳ ತಾಪತ್ರಯವಾಗಿ ಬಿಡಬಹುದು ಏಕೆಂದರೆ ಆರೋಗ್ಯ ಇಟ್ಟುಕೊಳ್ಳುವುದಕ್ಕೆ ಹೋಗಿ ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಬಹಳ ಕಷ್ಟವಾಗಬಹುದು.

ಶ್ರೀಮತಿ ಮನೋರಮಾ ಮಧ್ವರಾಜ್.—ಆಮೇಲೆ ನಮ್ಮಲ್ಲಿ ಇನ್ನು ಒಂದು ಏನಾಗಿದೆ ಎಂದರೆ, ಅವರವರ ಕುಟುಂಬಗಳಲ್ಲಿಯೇ ಮದುವೆ ಆಗುವುದು ಅಂತಹವರಿಗೆ ಮಕ್ಕಳು ಹುಟ್ಟಿದರೆ ಅವರಲ್ಲಿ ಹೆಚ್ಚಾಗಿ ಮೆಂಟಲಿ ರಿಟಾರ್ಡ್‌ನೆಸ್ಸ್ ಇರುತ್ತದೆ ಇವೆಲ್ಲ ಕಾರಣಗಳಿಂದಾಗಿ ಬಹುಶಃ ನಮ್ಮ ದೇಶದಲ್ಲಿ ಇರುವಷ್ಟು ಕಾಯಿಲೆಗಳು ಮತ್ತು ಸಂಪ್ರದಾಯಗಳು ಬೇರೆ ಯಾವ ದೇಶದಲ್ಲಿಯೂ ಸಹ ಇಲ್ಲವೇನೋ ಈ ಸಂಪ್ರದಾಯಗಳನ್ನು ತಪ್ಪಿಸಿದರೆ ಮಾತ್ರ ಆಗ ಆರೋಗ್ಯವಂತರಾದ ಮಕ್ಕಳನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತದೆ ಇನ್ನೂ ನಮ್ಮ ವೈದ್ಯರುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಿಲ್ಲ ಎಂಬ ದೂರು ಇದೆ ನಿನ್ನೆಯ ದಿವಸ ಯಾರೋ ಒಬ್ಬ ಮಾನ್ಯ ಸದಸ್ಯರು ಹೇಳುತ್ತಿದ್ದರು ವೈದ್ಯರು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಅಲ್ಲಿ ಅವರು ವಾಸ ಮಾಡಲು ಸರಿಯಾದ ಮನೆ ಇರುವುದಿಲ್ಲ, ಅವರ ಮಕ್ಕಳಿಗೆ ಸರಿಯಾದ ಶಾಲೆಗಳ ಸೌಲಭ್ಯ ಇರುವುದಿಲ್ಲ ಎಂದು ಹೇಳಿದರು ಎಷ್ಟೋ ಮಂದಿ ವಿದ್ಯಾಭ್ಯಾಸ ಮುಗಿಸಿ ಹೊಸದಾಗಿ ಡಾಕ್ಟರ್ ಆಗಿ ನೇಮಕಗೊಂಡಿರುವವರು ಇರುತ್ತಾರೆ ಮದುವೆ ಆಗುವ ತನಕ ಅವರಾದರೂ ಒಂದು ಹಳ್ಳಿಗೆ ಹೋಗಿ ಕೆಲಸ ಮಾಡಬಹುದು ಅವರು ಸಂಸಾರಸ್ಥರಾದ ಮೇಲೆ ಮಕ್ಕಳಾದ ಮೇಲೆ ಬೇಕಾದರೆ ಅವರು ಹೇಳಿದ ಕಡೆ ಆಫವಾ ಶಾಲೆ ಇರುವ ಕಡೆ ಕೊಡಬಹುದು ಈ ವಿಚಾರದಲ್ಲಿ ನಾವು ಈಗ ಆಲೋಚನೆ ಮಾಡುತ್ತಿದ್ದೇವೆ. ಅದರಲ್ಲೂ ಮುಖ್ಯವಾಗಿ ಮಹಿಳಾ ವೈದ್ಯಾಧಿಕಾರಿಗಳಂತೂ ಹಳ್ಳಿಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇದು ಬಹಳ ದುರದೃಷ್ಟಕರ ಸರ್ಕಾರಿ ಒಬ್ಬ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗೆ ಅವರ ಕೋರ್ಸ್ ಮುಗಿಯುವತನಕ ಕನಿಷ್ಟ ೩ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವಾಗ ಅವರಲ್ಲಿ ಕೂಡ ಒಂದು ಕೃತಜ್ಞತಾ ಭಾವನೆ ಇರಬೇಕು. ಸರ್ಕಾರ ಇಷ್ಟೊಂದು ಹಣ ನಮಗೆ ಖರ್ಚು ಮಾಡಿದೆ ಆ ಹಣ ಜನತೆಯ ತೆರಿಗೆಯಿಂದ ಬಂದಂತಹ ಹಣ ಆ ಜನತೆಗೆ ನಾವು ಚಿರಋಣಿಗಳಾಗಿರಬೇಕು ಎನ್ನುವ ಒಂದು ಮನೋಭಾವನೆ ಅವರ ಮನಸ್ಸಿನಲ್ಲಿ ಇಟ್ಟುಕೊಂಡು ಹಳ್ಳಿಗಾಡು ಪ್ರದೇಶಗಳಿಗೆ ಹೋಗಿ ಅಲ್ಲಿನ ಜನರ ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡುವುದು ಸೂಕ್ತ.

ಡಾ. ಎಲ್. ಮಲಕರೆಡ್ಡಿ.—ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಸರ್ವೀಸ್ ಮಾಡ ಬೇಕಾಗಿತ್ತು ಅದನ್ನು ಈಗ ತೆಗೆದಿದ್ದಾರೆಂದು ಕಾಣುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನೋಡೋಣ ಹಾಗಿದ್ದರೆ ಒಂದು ಕಾನೂನು ಮಾಡಿ ಅವರಿಗೆ ಕಟ್ಟಪ್ಪಣೆಯನ್ನು ಕೊಡಲಿಕ್ಕೆ ಪ್ರಯತ್ನ ಪಡುತ್ತೇವೆ ನಿಜವಾಗಿಯೂ ಈ ಸಾರಿ ವರ್ಗಾವಣೆಯಲ್ಲಿ ನಾವು ನೋಡಿದ್ದೇವೆ. ಎಲ್ಲರೂ ಬೆಂಗಳೂರಿಗೆ ಬರಬೇಕು ಎಂದು ಹೇಳುತ್ತಾರೆ ಒಬ್ಬರೂ ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಿಲ್ಲ. ಕೆಲವರಂತೂ ಬೆಂಗಳೂರಿನಲ್ಲೇ ಹುಟ್ಟಿ ಬೆಂಗಳೂರಿನಲ್ಲಿಯೇ ಬೆಳೆದು ಬೆಂಗಳೂರಿನಲ್ಲಿಯೇ ಸಾಯುವುದು ಅವರಿಗೆ ವರ್ಗಾವಣೆಯಂತಲೇ ಇಲ್ಲ.

ಡಾ. ಎಲ್. ಮಲಕರೆಡ್ಡಿ.—ತಾವು ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಸಹ ಅವಕಾಶ ಮಾಡ ಬಹುದು.

ಶ್ರೀ ಬಿ. ಹೆಚ್. ಬನ್ನಿ ಕೋಡ್.—ಒಂದು ಕಾನೂನು ಮಾಡಿ ಬೆಂಗಳೂರಿನಲ್ಲಿ ಯಾರು ೨೦–೩೦ ವರ್ಷ ಇರುತ್ತಾರೋ ಅಂತಹವರನ್ನು ಹಳ್ಳಿಗಳಿಗೆ ಹಾಕಿ ಹಳ್ಳಿಯಲ್ಲಿ ಒಂದು ೧೦ ವರ್ಷ ಕೆಲಸ ಮಾಡಿ ಬರಲಿ. ಹಳ್ಳಿಯಲ್ಲಿ ಯಾರು ೧೦–೨೦ ವರ್ಷ ಕೆಲಸ ಮಾಡಿರುತ್ತಾರೋ ಅವರನ್ನು ಬೆಂಗಳೂರಿಗೆ ಹಾಕಿ ನ್ಯಾಯ ದೊರಕಿಸಿಕೊಡಬೇಕು. ಈ ನೌಕರರು ಇರುವುದು ಜನರ ಸೇವೆ ಮಾಡುವುದಕ್ಕೆ ವಿನಃ ಕೇವಲ ನೌಕರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಅಲ್ಲ ಎನ್ನುವುದನ್ನು ಅವರಿಗೆ ತಾವು ತಿಳಿಸಿ ಕೊಡಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೇ ಶ್ರೀಮಾನ್ ಸಿಂಧ್ಯಾ ಅವರು ನಿನ್ನೆ ಹೇಳಿದರು, ಇಂಡಿಯ ಪಾಪುಲೇಷನ್ ಪ್ರಾಜೆಕ್ಟ್ ಎಂದು ಏನು ಜಾಗತಿಕ ಬ್ಯಾಂಕಿನ ನೆರವಿನಿಂದ ನಮ್ಮ ಕೇಂದ್ರ ಸರ್ಕಾರ ತಂದು ಇವತ್ತು ಅದನ್ನು ನಿಲ್ಲಿಸುವ ಹಂತದಲ್ಲಿ ಇದೆ. ನಾನು ಮಂತ್ರಿಯಾಗಿ ಬಂದ ಮೇಲೆ ಈ ಯೋಜನೆ ಇದ್ದದನ್ನು ಕಂಡು ಇದನ್ನು ಬಳ್ಳಾರಿ, ಉತ್ತರಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅನ್ವಯಿಸಲು ವಿಸ್ತರಣೆ ಕೊಡಬೇಕೆಂದು ಕೇಂದ್ರಕ್ಕೆ ಮನವಿ ಮಾಡಿದ್ದೆ, ಅದನ್ನು ಅವರು ತಳ್ಳಿಹಾಕಿದ್ದಾರೆ ಎಂಬ ಸೂಚನೆ ಬಂದಿದೆ. ನಾನು ಮಾನ್ಯ ವಿರೋಧ ಪಕ್ಷಗಳವರಲ್ಲಿ ಕಳಕಳಿಯಿಂದ ಕೇಳುವುದೇನೆಂದರೆ ನಮ್ಮ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವುದರಿಂದ ಅವರ ಮನವೊಲಿಸಿ ಈ ಕಾರ್ಯಕ್ರಮ ಪುನಃ ಇಲ್ಲಿ ಬರುವ ಹಾಗೆ ಪ್ರಯತ್ನ ಮಾಡಬೇಕು.

ಆಮೇಲೆ ಡಾಕ್ಟರ್ ಮಲಕರೆಡ್ಡಿಯವರು ನಿನ್ನೆ ಮುಖ್ಯವಾದ ವಿಚಾರವೊಂದನ್ನು ಎತ್ತಿದರು. ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಪ್ರವೇಶಗಳನ್ನು ಬುಯಸಿ ಬಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ಹೇಳಿದರು. ತಾವು ದಯವಿಟ್ಟು ತಿಳಿಯಿರಿ. ನಮ್ಮ ಪೋಸ್ಟ್ ಗ್ರಾಜುಯೇಟ್ ಕೋರ್ಸಿನಲ್ಲಿ ಏನಾಗಿದೆ ಎಂದರೆ, ಶೇಕಡ ೨೫ ಸೀಟುಗಳನ್ನು ಕೇಂದ್ರ ಸರ್ಕಾರಕ್ಕೆ ನಾವು ಕೊಡಬೇಕಾಗಿದೆ. ಶೇಕಡ ೫೦ ರಷ್ಟು ಸೀಟುಗಳನ್ನು ಇನ್‌ಸರ್ವಿಸ್‌ನಲ್ಲಿರುವ ವಿದ್ಯಾರ್ಥಿಗಳಿಗೆ ಕೊಡಬೇಕಾಗುತ್ತದೆ, ಉಳಿದದ್ದರಲ್ಲಿ ಶೇಕಡ ೫೦ರಷ್ಟನ್ನು ಹೊಸದಾಗಿ ಎನ್‌ಟ್ರೆನ್ಸ್ ಎಕ್ಸಾಮ್ ಮುಗಿಸಿ ಬಂದವರಿಗೆ ಕೊಡಬೇಕಾಗುತ್ತದೆ. ಈ ಸೆಲೆಕ್ಷನ್ ಕೆಲಸ ೩೧ನೇ ಜನವರಿಗೆ ಮುಗಿಯಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ತನ್ನ ಪಾಲಿನ ೨೫ ಸೀಟುಗಳನ್ನು ಭರ್ತಿಮಾಡಿಕೊಳ್ಳುವುದಕ್ಕೆ ಆಗದೆ ವಾಪಸ್ ಅದನ್ನು ನಮ್ಮ ಸರ್ಕಾರಕ್ಕೆ ಸರಂಡರ್ ಮಾಡಿದರು ನಮ್ಮ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿತೆಂದರೆ, ಇನ್‌ಸರ್ವಿಸ್‌ನಲ್ಲಿರುವವರಿಗೆ ಈ ಎಲ್ಲ ಸೀಟುಗಳನ್ನು ಕೊಡಬೇಕೆಂದು ಆಲೋಚನೆ ಮಾಡಿತು. ಅಷ್ಟರಲ್ಲಿ ಹೊಸದಾಗಿ ಸೇರಬಯಸಿದ ವಿದ್ಯಾರ್ಥಿಗಳು ನಮಗೂ ಅದರಲ್ಲಿ ಪಾಲುಬೇಕು ಎಂದು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ಡಿಸಿಷನ್ ಬರುವುದಕ್ಕೆ ಲೇಟಾಯಿತು. ಅದರಲ್ಲೂ ಕೂಡ ೫೦ ಪರ್ಸೆಂಟನ್ನು ಇನ್‌ಸರ್ವಿಸ್‌ನಲ್ಲಿರುವವರಿಗೆ ಮತ್ತು ಉಳಿದ ೫೦ ಪರ್ಸೆಂಟಿನ್ನು ಹೊಸದಾಗಿ ಬಂದಂಥ ಎಂಟ್ರನ್ಸ್ ಎಗ್ಸಾಂ ಪಾಸಾದಂಥ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಆಯಿತು. ಇದಕ್ಕೆ ಸರ್ಕಾರದಿಂದ ಆರ್ಡರ್ ಹೋಗಬೇಕಾದರೆ ಸ್ವಲ್ಪ ವಿಳಂಬವಾಯಿತು. ಅದು ಸರ್ಕಾರದ ತಪ್ಪೇ ಹೊರತು ನಮ್ಮ ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್‌ರವರ ತಪ್ಪು ಖಂಡಿತ ಅಲ್ಲ ಎಂದು ಹೇಳಿಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಹಿಂದಿನ ಸರ್ಕಾರವೇ ಇದನ್ನು ಹೇಗೆ ನಿಯಂತ್ರಿಸಬೇಕೆಂದು ಒಂದು ಸಮಿತಿಯನ್ನು ಮಾಡಿತು. ಆ ಸಮಿತಿಯ ವರದಿಯನ್ನು ಆಧಾರವಾಗಿಟ್ಟುಕೊಂಡು ಮಾನ್ಯ ರಾಜ್ಯಪಾಲರು ಈ ಒಂದು ಪ್ರವೇಶ ಶುಲ್ಕವನ್ನು ವಿಧಿಸಿದ್ದಾರೆ. ತಾವು ಹೇಳಿದಂತೆ ಮಂಗಳೂರು ಮೆಡಿಕಲ್ ಕಾಲೇಜಿಗೆ ೧೭೫ ಸೀಟ್ ಇಲ್ಲ, ಅವರಿಗೆ ೨೫೦ ಸೀಟ್ ಕೊಟ್ಟಿದ್ದೀರಿ ಎಂದು ಹೇಳಿದಿರಿ. ಅದೂ ನಾವು ಕೊಟ್ಟಿದ್ದಲ್ಲ. ೧೯೮೬–೮೭ರಲ್ಲಿ ಹೆಚ್ಚಿನ ವಿದ್ಯಾರ್ಥಿಗಳನ್ನು ಅವರು ಸೇರಿಸಿಕೊಂಡುಬಿಟ್ಟಿದ್ದರು. ಅವರಿಗೆ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ನಾವು ಅಲೋ ಮಾಡಲಿಲ್ಲವೆಂದರೆ ಅಷ್ಟೂ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ ಆದ್ದರಿಂದ ಅವರು ಏನು ಹೆಚ್ಚುವರಿ ವಿದ್ಯಾರ್ಥಿಗಳನ್ನು ತೆಗೆದುಕೊಂಡಿದ್ದಾರೆ ಅವರಿಗೆ ಈ ವರ್ಷದ ಮಟ್ಟಿಗೆ ಮಾತ್ರ ಸಂಪುಟದ ಸಭೆ ಅನುಮತಿ ಕೊಟ್ಟಿದೆಯೇ ಹೊರತು ನಮ್ಮದು ೧೯೮೭–೮೮ರ ಪಾಲಿಸಿ ಖಂಡಿತ ಅಲ್ಲ. ಹಿಂದಿನ ಪಾಪದ ಹೊರೆಯನ್ನು ನಾವು ಹೊರಬೇಕಾಗಿ ಬಂದಿದೆ ಎಂದು ಪತ್ರಿಕೆಯಲ್ಲಿ ಬಂದಿದೆ ಆದರೆ ಅದನ್ನು ಹೊರುವುದಕ್ಕೆ ನಾವು ಸಿದ್ಧವಿಲ್ಲ ನರಕಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲ. ನಾವೇನಾದರೂ ತಪ್ಪು ಮಾಡಿದರೆ ಮಾತ್ರ ನಾವು ಪಾಪದ ಹೊರೆ ಹೊತ್ತುಕೊಳ್ಳುತ್ತೇವೆಯೇ ಹೊರತು ಹೊಣೆಗಾರರನ್ನಾಗಿ ಮಾಡಬೇಡಿ. ಆ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡಬಾರದೆಂದು ಹಾಗೆ ಮಾಡಿದ್ದೇನೆಯೇ ಹೊರತು ೧೯೮೭–೮೮ಕ್ಕೆ ಖಂಡಿತವಾಗಿ ನಾವು ಆ ನಿಟ್ಟಿನಲ್ಲಿ ಹೋಗುವುದೇ ಇಲ್ಲ.

ಈಗಾಗಲೆ ನಮ್ಮ ಸಂಪುಟ ಸಭೆಯಲ್ಲಿ ಕೂಡ ಅದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿ ಮುಂದಿನ ವರ್ಷಕ್ಕೆ ಯಾವ ರೀತಿ ನಾವು ರೂಪು ರೇಷೆಯನ್ನು ಕೊಡಬೇಕು, ಕಾಯಕಲ್ಪವನ್ನು ಕೊಡಬೇಕು, ಎಂಬ ಆಲೋಚನೆಯಲ್ಲಿದ್ದೇವೆ. ಆದ್ದರಿಂದ ನಾವು ಖಂಡಿತ ಅಂತಹ ತಪ್ಪನ್ನು ಕೊಡಲಿಕ್ಕೆ ಹೋಗುವುದಿಲ್ಲ

ಡಾ ಎಲ್. ಮಲಕರೆಡ್ಡಿ.—ನೀವು ಇಷ್ಟು ಸರಳಗೊಳಿಸುತ್ತಿದ್ದೀರಿ. ಆದರೆ ಕಾಲೇಜಿನವರು ಪ್ರತಿ ಸೀಟಿಗೆ ೨ ಲಕ್ಷ ರೂಪಾಯಿ ಕ್ಯಾಪಿಟೇಷನ್ ಫೀ ತೆಗೆದುಕೊಂಡಿದ್ದಾರೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಈಗ ಕ್ಯಾಪಿಟೇಷನ್ ಶುಲ್ಕವೇ ಇಲ್ಲದಿರುವಾಗ ನೀವು ಅದನ್ನೇ ಹೇಳುತ್ತಿದ್ದೀರಿ. ೫ಲಕ್ಷ ೧೦ ಲಕ್ಷ ತೆಗೆದುಕೊಳ್ಳುತ್ತಾರೆಂದು ಎಲ್ಲರೂ ಹೇಳುತ್ತಾರೆ. ಆದರೆ ಒಬ್ಬರೂ ಕೂಡ ನಿರ್ದಿಷ್ಟವಾದ ಒಂದು ಅಪಾದನೆಯನ್ನು ಕೊಡಲಿಕ್ಕೆ ಇಷ್ಟಪಡುವುದಿಲ್ಲ. ನಿನ್ನೆತಾನೆ ನೀವು ಮಣಿಪಾಲದಲ್ಲಿ ೧೭೫೦ ಬೆಡ್ಸ್ ಇಲ್ಲವೆಂದು ಹೇಳಿದಿರಿ ನಾನು ವೆರಿಫೈ ಮಾಡಿದ್ದೇನೆ, ಅಲ್ಲಿ ೧೭೫೫ ಬೆಡ್ಸ್ ಇವೆ.

ಡಾ. ಎಲ್. ಮಲಕರೆಡ್ಡಿ.—ಹಾಗಾದರೆ ನಾನೂ ಒಂದು ಗ್ಯಾರೇಜ್ ಕಟ್ಟಿಸಿ ೨ ಸಾವಿರ ಬೆಡ್ಸ್ ಹಾಕಿಸುತ್ತೇನೆ ಅಷ್ಟು ಪೇಷೆಂಟ್ಸ್ ಅಲ್ಲಿ ಬರುತ್ತಾರೆಯೇ ಇಷ್ಟು ಬೆಡ್ಡಿಗೆ ಕನಿಷ್ಟ ಇಷ್ಟು ಫೆಸಿಲಿಟೀಸಾದರೂ ಇರಬೇಕು ಎಂದು ನಿಯಮವಿರುವಂತೆ ಅಲ್ಲಿ ಸೌಲಭ್ಯ ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ಆ ಕ್ಷೇತ್ರದಿಂದ ಆರಿಸಿ ಬಂದಿರುವವಳು ಸ್ವಲ್ಪ ದಿವಸದ ಹಿಂದೆ ಒಂದು ಬಸ್ ಆಕ್ಸಿಡೆಂಟ್ ಆಯಿತು. ೬೪ ಜನಕ್ಕೆ ತುಂಬ ಸಿಕ್ಕಾಪಟ್ಟೆ ಏಟಾಗಿತ್ತು, ಕೆಲವರ ಸ್ಥಿತಿಯಂತೂ ಚಿಂತಾಜನಕವಾಗಿತ್ತು ಅಂತಹ ಸಮಯದಲ್ಲಿ ಸರ್ಕಾರಿ ಆಸ್ಪತ್ರೆ ಅಂದರೆ ಆ ಆಸ್ಪತ್ರೆಗಳಲ್ಲಿ ಏನೂ ಇರುವುದಿಲ್ಲ ಎಂಬುದು ನನಗೂ ಗೊತ್ತು ನಿಮಗೂ ಗೊತ್ತು. ನಾನೊಬ್ಬಳೇ ಅದನ್ನು ಸರಿಪಡಿಸುವುದಕ್ಕೂ ಆಗುವುದಿಲ್ಲ ಜೊತೆಗೆ ಒಮ್ಮೆಲೆ ಎಲ್ಲವನ್ನೂ ಸರಿಪಡಿಸುವುದಕ್ಕೆ ಆಗುವುದಿಲ್ಲ. ಆಕ್ಸಿಡೆಂಟಾದ ರೋಗಿಗಳನ್ನು ಕೂಡಲೇ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ತಕ್ಷಣ ಎಲ್ಲ ವೈದ್ಯರೂ ಸೇರಿ ಎಲ್ಲ ಗಾಯಾಳುಗಳಿಗೆ ತಾರ್ತು ಚಿಕಿತ್ಸೆ ಕೊಟ್ಟರು. ನಾನು ಮೂರು ಗಂಟೆ ಕಾಲ ಆ ಆಸ್ಪತ್ರೆಯಲ್ಲಿ ಇದನ್ನು ನೋಡುತ್ತಿದ್ದೆ. ಆಗ ನನಗೆ ನಿಜವಾಗಿ ಅನಿಸಿತು. ದಿವಂಗತ ಪುಣ್ಯಾತ್ಮ ಡಾ. ಟಿ.ಎಂ.ಎ ಪೈಗಳವರು ಇಲ್ಲಿ ಒಂದು ಕಾಲೇಜು ಸ್ಥಾಪನೆ ಮಾಡಲಿಕ್ಕೆ ಹೊರಗಿ ಇಂತಹ ಒಂದು ಆಸ್ಪತ್ರೆಯಾಯಿತು, ಇಲ್ಲದೇ ಹೋಗಿದ್ದಿದ್ದರೆ ಅವರಿಗೆಲ್ಲ ಎಲ್ಲಿ ಚಿಕಿತ್ಸೆ ಸಿಗುತ್ತಿತ್ತು ಪಾಪ ಎಷ್ಟೋ ಮಂದಿ ಗಾಯಾಳುಗಳು ಪ್ರಾಣ ಕಳೆದುಕೊಳ್ಳುತ್ತಿದ್ದರು ಇವತ್ತು ಅವರಿಗೆ ನಾನೇನೂ ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವುದಕ್ಕೆ ಖಂಡಿತ ಸಪೋರ್ಟ್ ಮಾಡುವುದಿಲ್ಲ ಆದರೆ ಅವರು ಮಾಡಿದ ಕೆಲವು ಉತ್ತಮ ಕೆಲಸಗಳನ್ನು ನಾವು ಮೆಚ್ಚಿದ್ದಿದ್ದರೆ ನಮ್ಮ ಆತ್ಮಕ್ಕೆ ನಾವು ವಂಚನೆ ಮಾಡಿಕೊಂಡ ಹಾಗೆ ಆಗುತ್ತದೆ. ಅಷ್ಟೇ ಅಲ್ಲ ಅಲ್ಲಿ ಕಲಿತಂಥ ವಿದ್ಯಾರ್ಥಿಗಳಿಗೆ ಒಳ್ಳೆಯ ಹೆಸರು ಉಂಟು ಅವರಿಗೆ ಇಡೀ ಪ್ರಪಂಚದಲ್ಲಿ ಬೇಡಿಕೆ ಇದೆ ಅಲ್ಲಿಗೆ ಉತ್ತರ ಕನ್ನಡ, ಶಿವಮೊಗ್ಗ ಕೇರಳಗಳಿಂದಲೂ ರೋಗಿಗಳು ಬರುತ್ತಾರೆ. ನನಗಂತೂ ಅದರ ಬಗ್ಗೆ ಸಮಾಧಾನ ಇದೆ. ಆದರೆ ಯಾವುದಾದರೂ ನಿರ್ದಿಷ್ಟವಾದ ಅಪಾದನೆಗಳಿದ್ದರೆ ವಿಚಾರಣೆ ಮಾಡಬಹುದೇ ಹೊರತು ಸುಮ್ಮನೆ ಲೊಕಾಭಿರಾಮವಾಗಿ ಮಾತನಾಡಿದರೆ ಬಹಳ ಕಷ್ಟವಾಗುತ್ತದೆ. ಅವರು ಮಾಡಿದಂಥ ಗಣನೀಯ ಸೇವೆಯನ್ನು ನಾವು ಇವತ್ತು ಸ್ಮರಿಸಬೇಕು. ಬೆನ್ನೆ ಬೆಂಗಳೂರಿನಲ್ಲಿ ವಿಮಾನಾಪಘಾತವಾದಾಗ ಗಾಯಾಳುಗಳನ್ನು ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ಚೆನ್ನಾಗಿ ಆರೈಕೆ ಮಾಡಿದರು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದುವರೆಗಿನ ಡಾಕ್ಟರ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಕಳವಳ ಇರುವುದು ಹೊಸ ಪ್ರಾಕ್ಟ್‌ಗಳ ಬಗ್ಗೆ.

ಶ್ರೀ ರಾಮ್ಯಯ್ಯ ಪೂಜಾರಿ.—ಸಚಿವರು ಅಥವಾ ದುಡ್ಡಿರುವವರು ಆಸ್ಪತ್ರೆಗಳಿಗೆ ಹೋದರೆ ಚೆನ್ನಾಗಿ ಚಿಕಿತ್ಸೆ ಸಿಗುತ್ತದೆ ಆದರೆ ಸಾಮಾನ್ಯ ಜನರು ಈ ಆಸ್ಪತ್ರೆಗಳಿಗೆ ಹೋದರೆ ಯಾವ ಪರಿಸ್ಥಿತಿ ಇರುತ್ತದೆ ಎನ್ನುವುದನ್ನು ನಾವು ಮುಖ್ಯವಾಗಿ ಗಮನಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಹಣ ಕೊಡುವುದಕ್ಕೆ ಆಗದಿದ್ದವರು ಬಡವರು ಎಷ್ಟೋ ಸಲ ನನ್ನ ಬಳಿ ಬಂದಾಗ ಮಣಿಪಾಲ ಆಸ್ಪತ್ರೆಗೆ ಫೋನ್ ಮಾಡಿ ಅಥವಾ ಕಾಗದ ಕೊಟ್ಟು ಕಳುಹಿಸಿ ಉಚಿತವಾಗಿ ಚಿಕಿತ್ಸೆ ಕೊಡಿಸಿದ್ದೇನೆ. ಅವರು ಕೊಡುತ್ತಿದ್ದಾರೆ.

ಹಾಗಾಗಿ ಇವತ್ತು ಕೆಚ್ಚಿನ ಸದಸ್ಯರುಗಳಲ್ಲಿ ನನ್ನ ಕಳಕಳಿ ಏನೇದರೆ, ನಮ್ಮ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲ ಆಗುಪಂಥದ್ದನ್ನು ಕೆಲವರು ಲೂಟಿ ಮಾದು ಹೇಳಿದರೆ, ಕೆಲವರು ದರೋಡೆ ಎಂದು ಹೇಳುತ್ತಾರೆ. ಆದನ್ನು ನಮ್ಮನೆ ಕೇಳಿದ್ದೇವೆಯೇ ಹೊರತು ನಮಗೆ ನಿರ್ದಿಷ್ಟವಾಗಿ ಇದುವರೆಗೂ ಕಂಪ್ಲೇಂಟ್ ಯಾವುದೂ ಬಂದಿಲ್ಲ. ಏತಕ್ಕೆಂದರೆ, ಮೊನ್ನೆ ಕೂಡಾ ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು. ನಮ್ಮ ಡಾಕ್ಟರ್ ಮಾಲಕರೆಡ್ಡಿಯವರು ಬಹಳಷ್ಟು ಅನುಭವ ಇರತಕ್ಕಂಥ ವೈದ್ಯರು, ನಾನು ನಿಜವಾಗಿಯೂ ಅವರನ್ನು ಅಭಿನಂದಿಸುತ್ತೇನೆ. ಅವರು ವೈದ್ಯರಾಗಿದ್ದುಕೊಂಡು ಬಹಳ ಅನುಭವವನ್ನು ಪಡೆದಿದ್ದಾರೆ ಮತ್ತು ಕೆಲವು ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಅದೇ ರೀತಿ ನಾವು ಕತ್ತಲೆಯಲ್ಲಿ ಇರುತ್ತೇವೆ. ಆದರೆ ಬೆಳಕನ್ನು ಚೆಲ್ಲಬೇಕಾದವರು ತಾವು ನಮ್ಮಲ್ಲಿ ಬೇಕಾದಷ್ಟು ಸದಸ್ಯರುಗಳು ವೈದ್ಯರಿದ್ದಾರೆ. ಬಹುಶಃ ಈ ವರ್ಷ ಶಾಸನ ಸಭೆಗೆ ಬಂದಷ್ಟು ವೈದ್ಯ ಶಾಸಕರುಗಳು ಹಿಂದೆಂದೂ ಬಂದಿರಲಾರರು ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೆ ಮಾನ್ಯ ಚೌದರಿ ಪುತ್ತು ಮಾಲಕರೆಡ್ಡಿಯವರನ್ನು ಬಿಟ್ಟರೆ ಬೇರೆ ಯಾರು ಕೂಡ ಈ ಖಾತೆಯ ಮೇಲೆ ಆಸಕ್ತಿ ವಹಿಸಿ ಮಾತನಾಡಲಿಲ್ಲ. ಬಹುಶಃ ಅವರಿಗೆ ಕಾಲಾವಕಾಶ ಇಲ್ಲದೇ ಇರಬಹುದು. ಮುಂದಿನ ವರ್ಷದಲ್ಲಿ ಯಾದರೂ ಅವರು ಭಾಗವಹಿಸಬಹುದೆಂದು ಇರಬಹುದು ಎಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಸಿಂಧ್ಯರವರು ಈಗ ಸಭೆಯಲ್ಲಿ ಇಲ್ಲ. ಅವರು ಹೇಳಿದರು, ಐ. ವಿ. ಫ್ಲೂಯಿಡ್ ತಯಾರು ಮಾಡುವ ಗಿಣಿ ಪರವಾನಿಗೆ ಪಡೆದ ಘಟಕಗಳು ಯಾವುವು ಎಂದು ಕೇಳಿದ್ದರು. ಆದರಲ್ಲಿ ಜಿಲ್ಲಾ ಆಸ್ಪತ್ರೆ ಬಿಜಾಪುರ, ಜಿಲ್ಲಾ ಆಸ್ಪತ್ರೆ ಮಂಡ್ಯ, ಜಿಲ್ಲಾ ಆಸ್ಪತ್ರೆ ಬೆಳಗಾಂ. ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ, ಜಿಲ್ಲಾ ಆಸ್ಪತ್ರೆ ದಾವಣಗೆರೆ, ಕೆ. ಎಂ. ಸಿ, ಆಸ್ಪತ್ರೆ ಹುಬ್ಬಳ್ಳಿ ಖಾಸಗಿ ಆಸ್ಪತ್ರೆಗಳು ಯಾವುವೆಂದರೆ, ಖಾದರ್ ಮೊಲ್ಲಾ ಆಸ್ಪತ್ರೆ ಮಂಗಳೂರು, ಕಸ್ತೂರ್‌ಬಾ ಆಸ್ಪತ್ರೆ, ಮಣಿಪಾಲ್, ಸೆಂಟ್ ಜಾನ್ ಮೆಡಿಕಲ್ ಕಾಲೇಜು ಆಸ್ಪತ್ರೆ ಬೆಂಗಳೂರು ಖಾಸಗಿ ವಾಣಿಜ್ಯ ತಯಾರಿಕರು ಯಾರೆಂದರೆ, ಹೆಲ್ತ್‌ಲೈನ್ ಖಾಸಗಿ ಸಂಸ್ಥೆ ಬೆಂಗಳೂರು, ಸ್ಟಡಿಲ್ಯಾಬ್, ಬೆಂಗಳೂರು, ಆಲ್ಫಾನ್ ನಯೋನ ಫಾರ್ಮಾಸಿಟಿಕಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು. ಕಿನೋ ಫಾರ್ಮಾಸಿಟಿಕಲ್ಸ್, ನಿಪ್ಪಾಣಿ, ಅದಕ್ಕೆ ಅವರು ಏನು ಹೇಳಿದರು ಎಂದರೆ, ಡ್ರಗ್ ಇನ್ಸ್‌ಪೆಕ್ಟರ್‌ಗಳಿಗೆ ಮತ್ತೆ ಐ. ವಿ. ಫ್ಲೂಯಿಡ್ ಯಾರು ತಯಾರು ಮಾಡುತ್ತಾರೆ, ಅವರವರಲ್ಲಿ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ, ಹಾಗಾಗಿ ಮಂಗಳೂರಿನ ಅಥವಾ ಇತರ ಕೆಲವು ಆಸ್ಪತ್ರೆಗಳ ಲೈಸೆನ್ಸ್‌ಗಳನ್ನು ರದ್ದು ಮಾಡುತ್ತಾರೆ, ಎಂದು ಹೇಳಿದ್ದಾರೆ ಅಂಥ ಒಂದು ವಿಚಾರ ನಮ್ಮ ಮುಂದೆ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲ, ಶಿವಮೊಗ್ಗ ಆಸ್ಪತ್ರೆಯಲ್ಲಿ ಕೂಡಾ ಇಂಥ ಒಂದು ಘಟಕ ಬಹಳ ಚೆನ್ನಾಗಿ ಕೆಲಸವನ್ನು ಮಾಡಿಕೊಂಡು ಸಾಧಾರಣ ಎರಡು ಸಾವಿರ ಐ. ಪಿ. ಫ್ಲೂಯಿಡ್ ಬಾಟಲ್‌ಗಳನ್ನು ತಯಾರು ಮಾಡತಕ್ಕಂಥ ಕೆಪಾಸಿಟಿಯನ್ನು ಪಡೆದುಕೊಂಡಿದ. ಇನ್ನು ರಕ್ತನಿಧಿ ಬ್ಲಡ್ ಬ್ಯಾಂಕ್ ಬಗ್ಗೆ ಹೇಳಿದರು, ಏಡ್ಸನ್ನು ಖಚಿತ ಪಡಿಸಿಪಡಿಸಿಕೊಳ್ಳಲು ಸರ್ಕಾರ ಈ ಕೆಳಕಂಡ ಆಸ್ಪತ್ರೆಗಳಲ್ಲಿ ಲಾಬೋರೇಟರಿಗಳನ್ನು ತೆರೆದಿದೆ. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು, ಗೌರಿಯಾ ಆಸ್ಪತ್ರೆ ಬೆಂಗಳೂರು, ಕೆ. ಎಂ. ಸಿ. ಆಸ್ಪತ್ರೆ ಹುಬ್ಬಳ್ಳಿ ಇದರಿಂದ ಮಾನ್ಯ ಸಿಂಧ್ಯಾರವರಿಗೆ ಸಮಾಧಾನವಾಗಿರಬಹುದು ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಅವರು ೧೮ ತಿಂಗಳ ಕಾಲ ಈ ಖಾತೆಯನ್ನು ವಹಿಸಿಕೊಂಡಿದ್ದು ಹೇಳಿದರು, ಅವರು ಸಾಕಷ್ಟು ಅನುಭವವನ್ನು ಪಡೆದು ಕೊಂಡಿರಬಹುದು. ನಾನು ಕೂಡಾ ಹಾಗೆಯೇ ಭಾವಿಸಿದ್ದೆ. ಈಗ ಸಮಗ್ರ ಈ ಇಲಾಖೆಯಲ್ಲಿ ತುಂಬ ಅನುಭವ ಆಗಿದೆ.

ಇನ್ನು ಆರೋಗ್ಯ ಇಲಾಖೆಯಲ್ಲಿ ಗರ್ಭಿಣಿಯರ ನೋಂದಣಿ ಮತ್ತು ಧನುರ್ವಾಯು ಲಸಿಕೆ. ನಿನ್ನೆ ಈ ಲಸಿಕೆ ಬಗ್ಗೆ ಕೂಡ ತಾವು ಹೇಳಿದ್ದೀರಿ. ಗರ್ಭಿಣಿಯರಿಗೆ ಕಬ್ಬಿಣಾಂಶದ ಮಾತ್ರೆಗಳು, ಶಿಶುಗಳಿಗೆ ಆರು ಪೂರಕ ರೋಗಿಗಳು ಭಾರದಂತೆ ಲಸಿಕೆ, ಶಿಶುಗಳಿಗೆ 'ಎ' ಅನ್ನಾಂಗದ ಪಾಕ ಕಾಡಿಸುವಿಕೆ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಜನನ ನಿಯಂತ್ರಣದಲ್ಲಿ ನಮ್ಮ ರಾಜ್ಯ ದೇಶಕ್ಕೇ ೧ನೇ ಸ್ಥಾನದಲ್ಲಿ ಇದೆ. ಇದನ್ನು ನಾವು ಹೇಳುವುದಿಲ್ಲ, ಭಾರತ ಸರ್ಕಾರವೇ ಒಪ್ಪಿದೆ. ಮೈಸೂರಿಬ್ಬಂದಿ ವರ್ಗದವರನ್ನು ಏನೂ ಕೆಲಸ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ. ಕೆಲವೊಮ್ಮೆ ಏನು ಆಗುತ್ತದೆ ಅಂದರೆ ಒಬ್ಬೊಬ್ಬರು ಕಟ್ಟು ಆದೇಶಗಳು ಇರುತ್ತಾರೆ. ನಾವು ಎಲ್ಲರನ್ನೂ ಒಂದೇ ತರಾಗಿ ನೋಡುವುದು ಸರಿಯಲ್ಲ. ಆಲ್ಲಿ ಉತ್ತಮವಾಗಿ ಕೆಲಸ ಮಾಡುವಂತಹವರೂ ಕೂಡ ಡೀ ವಾಲ್ಯೂಷನ್ ಆಗುತ್ತಾರೆ ಅಂಥಾದ್ದರಲ್ಲಿ ಕೆಲವರು ಒಳ್ಳೆಯ ಕೆಲಸಗಳನ್ನು ಮಾಡಿಕೊಂಡಿರುವವರನ್ನು ನಾವು ಪ್ರೋತ್ಸಾಹಿಸಬೇಕಾಗುತ್ತದೆ. ಆದರೆ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಲೇಬೇಕಾಗುತ್ತದೆ. ಆ ಮೇಲೆ ತಾವು ಆಕ್ಸಿಜೆಂಟ್ ಅದರ ಬಂದು ಗಂಟೆಯೊಳಗೆ ಅವರಿಗೆ ಚಿಕಿತ್ಸೆಯನ್ನು

ಮಾಡುವುದು ಒಳ್ಳೆಯದು ಎಂದು ಹೇಳಿದ್ದೀರಿ ಅದಕ್ಕೆ ನನ್ನ ಅಭಿಪ್ರಾಯ ಅಂದರೆ, ನ್ಯಾಶನಲ್ ಹೈವೇಯಲ್ಲಿರತಕ್ಕ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಹಂತ ಹಂತವಾಗಿ ಟ್ರಾಮಾ ಸೆಂಟರ್‌ಗಳನ್ನು ತೆರೆಯುವ ಪಂಥ ಪ್ರಯತ್ನ ಕೂಡ ನಾವು ಮಾಡುತ್ತಿದ್ದೇವೆ. ಇದರಿಂದ ಹೆಚ್ಚಲ್ಲದಿದ್ದರೂ ಸ್ವಲ್ಪವಾದರೂ ಉಪಶಮನ ದೊರಕೀತು ಎಂದು ನನ್ನ ಆಸೆ. ಮಾನ್ಯ ಸದಸ್ಯರು ಹೆಚ್ಚಾಗಿ ತಮ್ಮ ತಮ್ಮ ಕ್ಷೇತ್ರಗಳ ಬಗ್ಗೆ ಹೇಳಿದ್ದಾರೆ. ಮುಖ್ಯವಾಗಿ ವೈದ್ಯಾಧಿಕಾರಿಗಳು ಇಲ್ಲ. ದಾದಿಯರು ಇಲ್ಲ ಎಂಬ ಒಂದೇ ಒಂದು ಕೂಗನ್ನು ನಾವು ಕೇಳುತ್ತಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ ಮಾನ್ಯ ಬನ್ನಿಕೋಡ್‌ರವರು ನನ್ನ ಕ್ಷೇತ್ರದಲ್ಲಿ ೮ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇವೆ ಎಂದು ಹೇಳುತ್ತಿದ್ದರು. ನಾನು ಹೇಳಬೇಕಾಗಿದ್ದರೆ, ಸನ್ಮಾನ್ಯ ಸಭಾಧ್ಯಕ್ಷೆಯವರೇ, ನಮ್ಮ ಉಡುಪಿ ನನ್ನ ಸ್ವಂತ ಕ್ಷೇತ್ರದ ಸರ್ಕಾರಿ ಆಸ್ಪತ್ರೆಯಲ್ಲಿ ೮ ಹುದ್ದೆಗಳು ಖಾಲಿ ಇದ್ದವು ನನಗೆ ಗೊತ್ತೇ ಇಲ್ಲ ನಂತರ ಯಾರೋ ಇಬ್ಬರು ಬಂದು ನಮ್ಮನ್ನು ಈ ಆಸ್ಪತ್ರೆಯಿಂದ ಬೇರೆ ಕಡೆ ಹಾಕಿ ಎಂದು ಬೇಡಿಕೊಂಡರು. ನಾನು ಅವರನ್ನು ಬೇರೆ ಕಡೆ ಹಾಕಿದೆ. ಅಷ್ಟರಲ್ಲಿ ನಮ್ಮ ಆಸ್ಪತ್ರೆಯ ಸರ್ಜನ್ ಅವರು ಬಂದು ಮೇಡಮ್ ನಿಮ್ಮ ಆಸ್ಪತ್ರೆಯಲ್ಲಿ ಈಗ ೧೦ ಮೆಕೆನ್ಸಿಗಳು ಆಗಿದೆ ಎಂದರು. ನಮ್ಮ ಜಿಲ್ಲೆಯಲ್ಲಿ ೫೫ ವೇಕೆನ್ಸಿಗಳು ಇದ್ದು, ಈಗ ಅದು ೫೫ ಆಯಿತು. ಅಷ್ಟೇ ಅಲ್ಲ, ನಾನು ಮಂತ್ರಿಯಾಗುವುದಕ್ಕೆ ಮೊದಲು ಆ ಕಡೆಯಲ್ಲಿ ಕುಳಿತಿದ್ದಾಗ, ಮಾನ್ಯ ರಾಚಯ್ಯನವರು ಆರೋಗ್ಯ ಸಚಿವರಾಗಿದ್ದಾಗ ಅವರನ್ನು ನಮ್ಮ ಉಡುಪಿ ತಾಲ್ಲೂಕಿಗೆ ಒಂದು ಆಂಬುಲೆನ್ಸ್ ಕೊಡಿ ಎಂದು ಕೇಳಿದ್ದೆ. ಅವರು ಕೊಡುತ್ತೇನೆ ಎಂದು ಹೇಳಿದ್ದರು. ಅದು ಆಗಲಿಲ್ಲ. ಆದರೆ ನಾನೇ ಈ ಖಾತೆಯನ್ನು ವಹಿಸಿಕೊಂಡ ನಂತರ ನಮ್ಮ ಅಧಿಕಾರಿಗಳಿಗೆ ಒಂದು ಆಂಬುಲೆನ್ಸ್ ಅನ್ನು ಉಡುಪಿಗೆ ಕೊಡಿ ಎಂದು ಹೇಳಿದೆ. ಆದು ಇನ್ನೂ ಕೂಡ ಸಿಕ್ಕಲಿಲ್ಲ. ಏಕೆಂದರೆ, ನಮ್ಮ ಹಣದ ಪರಿಸ್ಥಿತಿ ಕೆಟ್ಟ ರೀತಿಯಲ್ಲಿ ಇದ್ದುದರಿಂದ ಸ್ವಲ್ಪ ಈ ರೀತಿ ಆಗುತ್ತಿದೆ. ನಿಮ್ಮ ಗತಿ ಚೆನ್ನಾಗಿದೆ. ಏಳು ವರ್ಷ ಬೇಕಾದಷ್ಟು ನೀವು ಮಾಡಿಕೊಂಡಿದ್ದಿರಿ. ಈಗ ಕಷ್ಟ ಬಂದದ್ದು ಈ ಭಾಗದಲ್ಲಿದ್ದವರಿಗೆ ನೀವು ಆರಾಮವಾಗಿ ಇದ್ದೀರಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಸಚಿವರು ಹೇಳತಕ್ಕದ್ದು ಸರಿಯಲ್ಲ. ಈ ರೀತಿ ಆಪಾದನೆ ಮಾಡತಕ್ಕದ್ದು ಸರಿಯಲ್ಲ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ಒಂದು ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಈ ರೀತಿ ಹೇಳಿಕೆ ಕೊಡುವುದು ಸರಿಯಲ್ಲ ಏಳು ವರ್ಷ ಜೀನ್ಸಾಗಿ ಮಾಡಿಕೊಂಡಿದ್ದೀರಿ ಎಂದು ಮಾನ್ಯ ಸಚಿವರು ಬೇಜವಾಬ್ದಾರಿಯಿಂದ ಹೇಳುವುದು ಸರಿಯಲ್ಲ. ಇಂದು ಬಹಳ ಗಹನವಾದಂಥ ವಿಷಯ ಮಾನ್ಯ ಸಚಿವರು ಈ ರೀತಿ ಆರೋಪ ಮಾಡುವುದು ಸರಿಯಲ್ಲ ಅವರು ಏಕೆ ಆ ರೀತಿ ಮಾತ್ರ ನಾಡುತ್ತಿದ್ದಾರೆಂದು ನನಗೆ ತಿಳಿಯುತ್ತಿಲ್ಲ ಏಳು ವರ್ಷಗಳಿಂದ ನಮ್ಮ ಸರ್ಕಾರ ಕಾರ್ಯಕ್ರಮಗಳನ್ನು ಮಾಡಿದೆ. ಸರ್ಕಾರ ಮಾಡಿದಂತಹ ಕೆಲಸ ಸ್ವತ್ತ ಆದರೂ ಸಹ ಮಾನ್ಯ ಸಚಿವೆಯರು ಈ ರೀತಿ ಹೇಳುವುದು ಸರಿಯಲ್ಲ

ಉಪಾಧ್ಯಕ್ಷರು.—ಮಾನ್ಯ ಸಚಿವೆಯವರು ಯೀಲ್ಡ್ ಆಗಿಲ್ಲ. ತಾವು ಬೇಕಾದರೆ ಉತ್ತರದ ನಂತರ ಪ್ರಶ್ನೆ ಕೇಳಿ

ಶ್ರೀ ಪಾತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ ಅವರಿಗೆ ಗೊತ್ತಿದೆ. ನಾವಿಬ್ಬರೂ ಇವರ ಜಾತಕ ಬಿಡಿಸಬೇಕಾಗಿಲ್ಲ ಖಜಾನೆಯನ್ನು ಖಾಲಿ ಮಾಡಿ ಹೋಗಿ ಈಗ ಒಮ್ಮೆಲೆ ಆರು ತಿಂಗಳಲ್ಲಿ ಎಲ್ಲಾ ಸರಿ ಮಾಡಿ ಎಂದು ಹೇಳಿದರೆ ಅದು ಸಾಧುವಲ್ಲ

ಶ್ರೀ ಬಿ. ಹೆಚ್. ಬನ್ನಿಕೋಡ್.—ಸರ್ಕಾರ ಜನರ ಕಲ್ಯಾಣ ಕಾರ್ಯಗಳನ್ನು ಮಾಡಿದಾಗ ಜನಪರ ಕಾರ್ಯಕ್ರಮಗಳನ್ನು ಮಾಡಿದಾಗ ಖಜಾನೆ ಖಾಲಿ ಆಗುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಸಂಬಳ ಕೊಡುವುದಕ್ಕೆ ದುಡ್ಡು ಇರಲಿಲ್ಲ...

(ಗೊಂದಲ)

ಉಪಾಧ್ಯಕ್ಷರು.—ಮಂತ್ರಿಗಳು ಉತ್ತರ ಮುಗಿಸಲಿ. ನಂತರ ನಾವು ಏನು ಬೇಕಾದರೂ ಕೇಳಬಹುದು.

ಶ್ರೀ ಬಿ. ಹೆಚ್. ಬನ್ನಿಕೋಡ್.—೭ ವರ್ಷಗಳಿಂದ ನೀವು ಮಾಡಿಕೊಂಡಿದ್ದೀರಿ ಎಂದು ಈ ರೀತಿ ಗುರುತರವಾದ ಆಪಾದನೆ ಮಾಡುವುದು ಸರಿಯಲ್ಲ. ಏಳು ವರ್ಷಗಳ ಕಾಲ ಜನಪರವಾದ ಕೆಲಸಗಳನ್ನು

ಮಾಡಿದ್ದೇವೆ ಶಾಲಾ ಮಕ್ಕಳಿಗೆ ಪುಸ್ತಕ, ಬಟ್ಟೆ ಕೊಟ್ಟಿದ್ದೇವೆ, ರೈತರ ಬಡ್ಡಿ ಸಾಲ ಮನ್ನಾ ಮಾಡಿದ್ದೇವೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಅವರು ತಮಗೆ ಬೇಕಾದ ವೈದ್ಯಾಧಿಕಾರಿಗಳನ್ನು ಆಸ್ಪತ್ರೆಗಳಿಗೆ ಹಾಕಿಕೊಂಡಿದ್ದರು. ನಾನು ಇಲ್ಲಿ ಪ್ರಶ್ನೆ ಕೇಳಿದ್ದೆ. ಏಕೆಂದು, ನಮ್ಮ ವಿರಾಜಪೇಟೆಯಲ್ಲಿ ಆಸ್ಪತ್ರೆ ಮತ್ತು ಉಡುಪಿ ಆಸ್ಪತ್ರೆ ಇವತ್ತಿಗೂ ಕೂಡ ತ್ರಿಶಂಕು ಸ್ವರ್ಗದಲ್ಲಿದೆ. ಏಕೆಂದರೆ ಆಧಿಕಾರ ವಿಕೇಂದ್ರೀಕರಣ ಮಾಡಿ ಜಿಲ್ಲಾ ಪರಿಷತ್ತಿಗೆ ಅದನ್ನು ವರ್ಗಾಯಿಸುವಾಗ ಎಲ್ಲಾ ಆಸ್ಪತ್ರೆಗಳೊಟ್ಟಿಗೆ ಅದನ್ನು ಕೊಟ್ಟಿದ್ದೇವೆಂದು ಓರಲ್ ಆಗಿ ಉತ್ತರ ಹೇಳಿದ್ದಾರೆಯೇ ಹೊರತು ಅದಕ್ಕೆ ಇವತ್ತಿಗೂ ಆದೇಶ ಇಲ್ಲ, ತಾವು ಬೇಕಾದರೆ ಬರಬಹುದು. ನಮ್ಮಲ್ಲಿ ಮಳೆ ಜಾಸ್ತಿ ಬರುತ್ತದೆ. ಈಗ ೧೫ ದಿವಸ ಆಯಿತು ಮಳೆ ಬಂದು ನಾನು ಉಡುಪಿಗೆ ಹೋಗಲಿಲ್ಲ. ಖಂಡಿತ ಫೋರಾಪ್ ಮಾಡುತ್ತಾರೆ ಎಂದು ನನಗೆ ಗೊತ್ತಾಗುತ್ತಿತ್ತು. ಮಾನ್ಯ ರಾಚಯ್ಯನವರು ಆರೋಗ್ಯ ಸಚಿವರಾಗಿದ್ದಾಗ ನಾನು ಒಂದು ಪ್ರಶ್ನೆ ಕೇಳಿದ್ದೆ. ಅವರು ಉಡುಪಿಗೆ ಎರಡು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇನೆ ಎಂದು ಹೇಳಿದ್ದರು. ನನಗೆ ಖುಷಿ ಆಯಿತು. ಅದು ನಮ್ಮ ಉದಯವಾಣಿ ಪತ್ರಿಕೆಯಲ್ಲಿಯೂ ಬಂತು. ಮಂತ್ರಿಗಳನ್ನು ಒಪ್ಪಿಸಿ ಎರಡು ಲಕ್ಷ ರೂಪಾಯಿಗಳನ್ನು ಉಡುಪಿಗೆ ತೆಗೆದುಕೊಳ್ಳುವಲ್ಲಿ ಶಾಸಕಿಯವರು ಸಫಲರಾದರು ಎಂದು ಸುದ್ದಿ ಬಂತು. ಆದರೆ ಇವೊತ್ತಿನವರೆಗೆ ಅದು ಏನೂ ಆಗಿಲ್ಲ. ಇದನ್ನು ನಾನು ಅತಿಶಯೋಕ್ತಿಯಾಗಿ ಹೇಳುವುದಲ್ಲ, ತಾವು ಒಪ್ಪಿಕೊಳ್ಳಿ ಇವತ್ತು ನಾವು ಒಂದಿದ್ದೇವೆ. ನಾವೂ ಕೂಡ ಮಾಡುತ್ತೇವೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬೇಕಾದಂಥ ವರ್ಗಾವಣೆಗಳನ್ನು. ಅದನ್ನು ಇದರಲ್ಲಿ ಎಲ್ಲಾ ಮಾಡಿಕೊಳ್ಳಬೇಕಾಗುತ್ತದೆ. ನೀವು ಏನು ಹೊಣ ಮಾಡಿದಿರಿ, ಎಂದು ನಾನು ಹೇಳಲಿಲ್ಲ. ನಿಮಗೆ ಬೇಕಾದಂಥ ಆಧಿಕಾರಿಗಳನ್ನು ಹಾಕಿಸಿಕೊಂಡಿದ್ದಿರಿ. ಇವತ್ತು ನಮಗೆ ಅವರಿಂದ ಏನಾದರೂ ತೊಂದರೆ ಬಂದರೆ ಅದನ್ನು ಸರಿಪಡಿಸಬೇಕಾಗಿರತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ.

ಶ್ರೀ ಬಿ. ಹೆಚ್. ಬನ್ನಿಕೋಡ್.—೭ ವರ್ಷ ಜನತೆಗೆ ಅನುಕೂಲತೆ ಮಾಡಿಕೊಟ್ಟಿದ್ದೀರಿ ಅಂದರೆ ಅದಕ್ಕೆ ನಮ್ಮ ಅಡ್ಡಿ ಇಲ್ಲ. ಆದರೆ ೭ ವರ್ಷ ನೀವು ಮಾಡಿಕೊಂಡಿದ್ದೀರಿ ಎನ್ನುವಂಥ ಮಾತಿಗೆ ನಮ್ಮ ಆಕ್ಷೇಪಣೆ ಇಷ್ಟೆ

ಶ್ರೀಮತಿ ಮನೋರಮಾ ಮಧ್ವರಾಜ್.—ಶ್ರೀಮಾನ್ ಸಿದ್ಧರವರು ಒಂದು ಮಾತನ್ನು ಹೇಳಿದರು, ಕಳೆದ ೧೦ ವರ್ಷಗಳಿಂದ ಹಾಳು ಪಾಪನಗಳು ಆಕ್ಷನ್ ಆಗದೆ ಹಾಗೇ ಬಿದ್ದಿವೆ ಎಂದು ಹೇಳಿದರು. ಖಂಡಿತ ನಾನು ಎಂದು ತೀರ್ಮಾನಕ್ಕೆ ಬರಬೇಕು ಎಂದು ಇದ್ದೇನೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಜಿಲ್ಲಾವೈದಾಧಿಕಾರಿಗಳು ಮತ್ತೆ ಜಿಲ್ಲಾ ಪರಿಷತ್ತಿನ ಮುಖ್ಯಕಾರ್ಯದರ್ಶಿಗಳನ್ನೊಳಗೊಂಡ ಒಂದು ಸಮಿತಿ ಮಾಡಿ ಅವನ್ನು ಅಲ್ಲಲ್ಲೆ ಆಕ್ಷನ್ ಮಾಡುವಂಥ ವಿಧಾನವನ್ನು ಮಾಡಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ. ಮತ್ತೆ ಜಿಲ್ಲಾಪರಿಷತ್ತುಗಳಲ್ಲಿ ಹೆಚ್ಚಿನ ಔಷಧಿಗಳನ್ನು ಖರೀದಿಸಲಿಕ್ಕೆ ಅವರಿಗೆ ಆಧಿಕಾರವನ್ನು ಕೊಟ್ಟಿದ್ದೇವೆ, ಆದರೆ ಇವತ್ತು ಪತ್ರಿಕೆಗಳಲ್ಲಿ ಬರುತ್ತಾ ಉಂಟು ಏನೆಂದರೆ, ಅಲ್ಲಿ ಭ್ರಷ್ಟಾಚಾರ ಆಗುತ್ತಾ ಉಂಟು, ಅಪವ್ಯಯ ಆಗುತ್ತಾ ಉಂಟು. ಸರಿಯಾಗಿ ಮದ್ದುಗಳು ಸಿಗುತ್ತಾ ಇಲ್ಲ, ನಾವು ಏನು ರೇಟ್ ಕಾಂಟ್ರಾಕ್ಟ್ ಮಾಡಿದ್ದೇವೆ ಅಲ್ಲಿಂದ ಔಷಧಿಗಳನ್ನು ಪರ್ಚೇಸ್ ಮಾಡದೆ ಇಷ್ಟು ಬಂದ ಹಾಗೆ ಮಾಡುತ್ತಾರೆ ಎಂದು ಪತ್ರಿಕೆಗಳಲ್ಲಿ ಬರುತ್ತಾ ಉಂಟು. ಅದಕ್ಕೆ ನಾವು ಒಂದು ಸಂಹಿತೆಯನ್ನು ತಯಾರು ಮಾಡಬೇಕು ಎಂದು ಇದ್ದೇವೆ. ಈ ಒಂದು ಕಂಪ್ಲೈಂಟ್ ಮೇಲೆ ಈಗಾಗಲೇ ನಮ್ಮ ಬಳ್ಳಾರಿ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಸಸ್ಪೆನ್ಷನ್‌ನಲ್ಲಿ ಕೂಡ ಇಟ್ಟಿದ್ದೇವೆ, ಹಾಗಿರುವಾಗ ಯಾವುದಾದರೂ ತಪ್ಪಾದರೂ ಕೂಡ ನಾವು ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಪಡುತ್ತೇವೆ. ತಾವು ಹೇಳಿದ ಹಾಗೆ, ಖಂಡಿತ ನಮಗೇನೂ ಉದಾಸೀನ ಇಲ್ಲ. ಯಾವುದೇ ಕೆಲಸವನ್ನು ವಹಿಸಿಕೊಂಡ ಮೇಲೆ ಜವಾಬ್ದಾರಿಯಿಂದ ಆ ಕೆಲಸವನ್ನು ಮಾಡುವುದು ನನ್ನ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ತಾವು ಏನು ಸಲಹಾ ಸೂಚನೆಗಳನ್ನು ಕೊಟ್ಟಿದ್ದೀರಿ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ. ನಮ್ಮ ಮುಲ್ಕಿ ಶಾಸಕರಾದ ಶ್ರೀಮಾನ್ ಸೊಮಪ್ಪ ಸುವರ್ಣ ಅವರು ನನ್ನ ಗುರುಗಳೂ ಹೌದು. ಅವರು ನನಗೆ ಹಿಂದಿ ಕಲಿಸಿದ ಗುರುಗಳು. ಅವರು ಹೇಳಿದರು, ಶಿವಿಂಗಿಲವನ್ನು ಕೊಲ್ಲುವವರು ನಿಮ್ಮ ವಿರುದ್ಧಗಾರರು, ಹಾಗಯೇ ನಮ್ಮ ಖಾಸಗಿ ವೈದ್ಯಕೀಯ ಕಾಲೇಜುಗಳಾದ ತಿಮಿಂಗಿಲಗಳನ್ನು ಕಂಟ್ರೋಲ್ ಮಾಡಬೇಕು ಎಂದು ಹೇಳಿದರು. ಅವರಿಗೆ ಗೊತ್ತಿಲ್ಲ, ತಿಮಿಂಗಿಲಗಳನ್ನು ಯಾರಿಂದಲೂ ಕೊಲ್ಲಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಏನೋ ಪ್ರಾಯವಾಗಿ, ಗಾಯವಾಗಿ ಸತ್ತು ಮೇಲೆ ಬರಬೇಕೆ ಹೊರತು ಅದನ್ನು ಹೊಡೆಯಲಿಕ್ಕೆ ಇವತ್ತಿನವರೆಗೂ ಯಾರಿಂದಲೂ ಸಾಧ್ಯವಾಗಿಲ್ಲ. ದೊಡ್ಡ ದೊಡ್ಡ ಹಡಗನ್ನೇ

ತಿಮಿಂಗಿಲ ಮಾಳುಗಿಸುತ್ತದೆ ಅಂಥಾದ್ದರಲ್ಲಿ ನೆಲದ ಮೇಲಿನ ತಿಮಿಂಗಿಲಗಳನ್ನು ನಾನೊಬ್ಬಳು ಕೊಲ್ಲಬೇಕು ಅಂದರೆ ಸಾಧ್ಯವಿಲ್ಲ, ನಾನು ಆ ಸಮಾಜದಲ್ಲಿ ಹುಟ್ಟಿರಬಹುದು. ಸಣ್ಣ ವಿಷಯಗಳನ್ನು ನಾವು ಹಿಡಿದಿದ್ದೇವೆಯೇ ಹೊರತು ತಿಮಿಂಗಿಲಗಳನ್ನು ಹಿಡಿಯಲಿಕ್ಕೆ ಆಗುವುದಿಲ್ಲ ದೊಡ್ಡ ವಿಷಯ ಸಣ್ಣ ವಿಷಯನ್ನು ಹಿಡಿದು ತಿನ್ನುವುದು ಬೇಡ. ಹಾಗಾಗಿ ಈ ಒಂದು ಗಂಭೀರವಾದ ಜವಾಬ್ದಾರಿಯನ್ನು ನನಗೆ ಕೊಟ್ಟಿದ್ದೀರಿ. ನಿಮ್ಮೆಲ್ಲರ ಸಹಕಾರ ಇದ್ದರೆ ನನ್ನಿಂದ ಮಾಡುವುದಕ್ಕೆ ಎಷ್ಟು ಸಾಧ್ಯವೊ ಅಷ್ಟು ಆದನ್ನು ಮಾಡಲಿಕ್ಕೆ ಖಂಡಿತ ನಾನು ಪ್ರಯತ್ನ ಪಡುತ್ತೇನೆ. ಆದಕ್ಕೆ ಸಮ್ಮನೆ ತಿಮಿಂಗಿಲ ಎಂದು ಏಕೆ ಹೆಸರು ಇಡುತ್ತೀರಿ. ಇದಕ್ಕಿಂತ ಬೇರೆ ಯಾವುದಾದರೂ ಹೆಸರು ಇಟ್ಟುಕೊಂಡು ಒಲುಮೆಯಿಂದಲೇ ಅವರ ಮನಸ್ಸೊಲಿಸಿ ಅವರಿಂದ ಕೆಲಸ ಮಾಡಿಸಿಕೊಳ್ಳಬಹುದು ಅಥವಾ ಸರ್ಕಾರ ಈ ನಿಟ್ಟಿನಲ್ಲಿ ಏನಾದರೂ ಒಂದು ಹತೋಟಿ ಇಟ್ಟುಕೊಳ್ಳಲಿಕ್ಕೆ ಏನು ಮಾಡಲಿಕ್ಕೆ ಸಾಧ್ಯವಿಲ್ಲವೆಂಬ ವಿಚಾರವನ್ನೂ ಕೂಡ ನಾವು ಮಾಡುತ್ತಾ ಇದ್ದೇವೆ. ನನ್ನ ಆಕ್ಷಾಸನೆ ಅಂದರೆ, ಈ ವಿಚಾರದಲ್ಲಿ ತಾವು ಧೈರ್ಯವಾಗಿ ಇರಬಹುದು ಎಂದು ನನ್ನ ಭಾವನೆ. ಶ್ರೀಪಾನ್ ಸಿದ್ಧಯ್ಯರವರು ಬಹಳ ನೋಡುತ್ತಾ ಇದ್ದಾರೆ. ಪಾಪ, ಅವರ ಕಾಲದಲ್ಲಿ ಕೂಡ ಹಲವು ಮೆಡಿಕಲ್ ಕಾಲೇಜುಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಅವರಿಗೆ ಇನ್ನೇನೂ ಮಾತನಾಡಲಿಕ್ಕೆ ಉಪಾಯವಿಲ್ಲ, ಕೊಟ್ಟು ಆಗಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಕೆ.ಎಂ.ಸಿ. ಹುಬ್ಬಳ್ಳಿ ಬಗ್ಗೆ ಉತ್ತರ ಬರಲಿಲ್ಲ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಕೆ.ಎಂ.ಸಿ ಹುಬ್ಬಳ್ಳಿ ಬಗ್ಗೆ ತಾವು ಮಾತನಾಡಿದಿರಿ, ಬಹಳ ಸಂತೋಷ, ನಾನೂ ಕೂಡ ಅಲ್ಲಿ ಸರ್‌ಪ್ರೈಸ್ ವಿಸಿಟ್ ಮಾಡಿದ್ದೇನೆ. ನಾನು ಅಲ್ಲಿ ಆಕಸ್ಮಿಕವಾಗಿ ಭೇಟಿ ಕೂಡ ಮಾಡಿದ್ದೇನೆ. ಅಲ್ಲಿಯ ಸಂಸತ್ ಸದಸ್ಯರನ್ನು ನೋಡಿದ್ದೇನೆ. ಆ ಆಸ್ಪತ್ರೆಯು ಆಚೆ ಬದಿಯಲ್ಲಿ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ ಯವರ ಮನೆ ಇದೆ ಎಂದು ಅಲ್ಲಿ ಯಾರೋ ಹೇಳಿದರು. ಅಲ್ಲ, ನೀವು ಇಷ್ಟು ವರ್ಷ ಆದಕ್ಕೆ ಏನೂ ಕಾರ್ಯಕಲ್ಪ ಮಾಡದೆ ನನ್ನ ಹತ್ತಿರ ಬಂದು ಕೆ.ಎಂ.ಸಿ. ಹುಬ್ಬಳ್ಳಿ, ಕೆ.ಎಂ.ಸಿ. ಹುಬ್ಬಳ್ಳಿ ಅಂದರೆ ಹೇಗೆ, ಅವರು ಏನು ಮಾಡುತ್ತಿದ್ದರು. ಅವರು ಮುಖ್ಯಮಂತ್ರಿಯಾಗಿದ್ದುಕೊಂಡು ಅವರ ಕ್ಷೇತ್ರದಲ್ಲಿ ಏನು ಮಾಡಿದರು.

ಶ್ರೀ ಪಿ. ಸಿ. ಸಿದ್ದನಗೌಡರ್.—ಅವರು ಏನು ಮಾಡಿದರು ಎನ್ನುವುದಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ನೀವು ಇದೇ ಮಾತನ್ನು ಹೇಳುತ್ತಾ ಹೋದರೆ ಬಹಳ ಲಘು ಇಲ್ಲಿ ಬರುತ್ತೀರಿ, ನಾವು ಮಾಡಿಲ್ಲ ಅದಕ್ಕೆ ಇಲ್ಲಿ ಬಂದಿದ್ದೇವೆ. ನೀವು ಮಾಡಿ.

ಶ್ರೀಮತಿ ಮನೋರಮಾ ಮಾಧ್ವರಾಜ್.—ನಾವು ಮಾಡುತ್ತೇವೆ ಸ್ವಾಮಿ.

ಶ್ರೀ ಪಿ. ಸಿ. ಸಿದ್ದನಗೌಡರ್.—ನೀವು ಜವಾಬ್ದಾರಿ ಸಚಿವರಾಗಿ ಈ ರೀತಿ ಉತ್ತರ ಕೊಡಬಾರದು. ನಾನು ಪಾರ್ಟಿ ದೃಷ್ಟಿಯಿಂದ ಮಾತನಾಡಲಿಲ್ಲ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಕೆ.ಎಂ.ಸಿ. ಹಾಳಾಗಿ ಹೋಗಿದೆ, ಏನಾದರೂ ಸಾಧಾರಣೆ ಮಾಡಿ ಎಂದು ಹೇಳಿದ್ದೇನೆ. ಹಾಗಾದರೆ ಆಗುವುದಿಲ್ಲ ಎಂದು ಹೇಳಿಬಿಡಿ.

೧೨–೩೫ ಪಿ.ಎಂ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಈ ಸರ್ಕಾರ ಕೇವಲ ಒಂದು ಪಕ್ಷಕ್ಕೆ ಸಂಬಂಧಪಟ್ಟಿದಲ್ಲ. ಇಡೀ ರಾಜ್ಯದ ನಾಲ್ಕು ಕೋಟಿ ಜನರಿಗೆ ಸಂಬಂಧಪಟ್ಟದ್ದು. ಆ ಪಕ್ಷದವರು ಏನು ಮಾಡಿದರು, ಈ ಪಕ್ಷದವರು ಏನು ಮಾಡಿದರು ಎಂದು ಹೇಳುವುದಕ್ಕಿಂತ ರಾಜ್ಯದ ಇಡೀ ನಾಲ್ಕು ಕೋಟಿ ಜನರಿಗೆ ಕಲ್ಯಾಣವಾಗುವಂತೆ ಕೆಲಸ ಮಾಡಿ.

ಶ್ರೀಮತಿ ಮನೋರಮಾ ಮಾಧ್ವರಾಜ್.— ನಾವು ಆ ಕಡೆ ಕುಳಿತು ಮಾತನಾಡುವಾಗ ಇಲ್ಲಿಂದ ಇದೇ ರೀತಿ ಉತ್ತರ ಕೊಡುತ್ತಿದ್ದರು.

ಶ್ರೀ ಆರ್. ವಿ. ದೇಶಪಾಂಡೆ.— ನಾವು ಕೆಲಸ ಮಾಡದೇ ಇದ್ದುದಕ್ಕೆ ಜನ ನಮಗೆ ಶಿಕ್ಷೆ ಕೊಟ್ಟು ಇಲ್ಲಿ ಕೂರಿಸಿದ್ದಾರೆ.

ಶ್ರೀಮತಿ ಮನೋರಮಾ ಮಾಧ್ವರಾಜ್.— ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಇನ್ನು ನಾಲ್ಕು ವರ್ಷ ಉಂಟು ಕೆ.ಎಂ.ಸಿ. ಹುಬ್ಬಳ್ಳಿ ಬಗ್ಗೆ ಏನೆಲ್ಲ ಮಾಡಲಿಕ್ಕೆ ಸಾಧ್ಯವೆಯೆಂದು ನೋಡೋಣ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಕೆ.ಎಂ.ಸಿ. ಹುಬ್ಬಳ್ಳಿ ಈ ಬೇಡಿಕೆಯಲ್ಲಿ ಬರುತ್ತದೆ. ಆದರೆ ಅದರ ಪಕ್ಕದಲ್ಲಿರುವಕ್ಕೆ ಮನೆ ಈ ಬೇಡಿಕೆಯಲ್ಲಿ ಬರುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.— ನಮ್ಮ ಮುಖ್ಯಮಂತ್ರಿಗಳು ಅವರ ಭಾಗಕ್ಕೆ ಎಷ್ಟು ಕೋಟಿ ಹಣ ಕೊಟ್ಟಿದ್ದಾರೆ ನೋಡಿ, ಅದೇ ರೀತಿ ಮಾಡಬೇಕಿತ್ತು. ಅದು ಅವರವರ ಚಾಕಚಕ್ಯತೆ.

ಶ್ರೀ ಆರ್. ವಿ. ದೇಶಪಾಂಡೆ.— ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂದು ಹೇಳಿ ಬಜೆಟ್‌ನಲ್ಲಿ ಹಣ ಕೊಟ್ಟಿದ್ದು ಮಾನ್ಯ ಬೊಮ್ಮಾಯಿಯವರು ಅದಕ್ಕೆ ಚಾಲನೆಯನ್ನು ಈಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಆ ಭಾಗ ಅಭಿವೃದ್ಧಿ ಆಗಬೇಕೆನ್ನುವ ಇಚ್ಛೆ ನಮ್ಮ ಸರ್ಕಾರಕ್ಕೂ ಇತ್ತು. ಈಗ ಎಕ್ಸೈಜ್‌ನಿಂದ ಸಾಕಷ್ಟು ಹಣ ಬರುತ್ತದೆ. ಇಷ್ಟು ಪರ್ಮಾನೆ ಮಂಜೂರು ಮಾಡುತ್ತೇವೆ, ಇಷ್ಟು ಪಿ.ಹೆಚ್.ಸಿ ಮಾಡುತ್ತೇವೆ ಎಂದು ಹೇಳಿ. ನಿಮಗೂ ಗೌರವ ಬರುತ್ತೆ. ನಮಗೂ ಸಂತೋಷವಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳಿದರು...

ಉಪಾಧ್ಯಕ್ಷರು — ಅವರು ಯೀಲ್ಡಾಗಿಲ್ಲ. ಪದೇ ಪದೇ ಎದ್ದು ಇಂಟರ್‌ವಿನ್ ಮಾಡಿದರೆ ಅವರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಪಿ. ಸಿ. ಸಿದ್ದನಗೌಡರ್.— ಕೆ.ಎಂ.ಸಿ. ಹುಬ್ಬಳ್ಳಿ ಬಗ್ಗೆ ಹೇಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್. — ಮುಖ್ಯಮಂತ್ರಿಗಳು ನಿಮ್ಮ ಜಿಲ್ಲೆಯವರಾಗಿದ್ದರೂ ಏಕೆ ಆಗಲಿಲ್ಲ ಎಂದು ಕೇಳಿದರು. ನಮ್ಮ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರಿದ್ದರೂ, ಬೇರೆ ಜಿಲ್ಲೆಗಳ ಅಭಿವೃದ್ಧಿಗಾಗಿ ತ್ಯಾಗ ಮಾಡಿ ಬೇರೆಯವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಹಣ ಇಲ್ಲವೆಂದು ಹೇಳುವುದು ಬೇಡ...

ಶ್ರೀಮತಿ ಮನೋರಮಾ ಮಧ್ವರಾಜ್,— ಹಣ ಇಲ್ಲ ಅಂತ ನಾವು ಬೊಬ್ಬೆ ಹಾಕುತ್ತಿಲ್ಲ. ಈಗ ಒಳ್ಳೆಯ ರೀತಿಯಲ್ಲಿ ಹಣ ಕ್ರೋಢೀಕರಣ ಆಗುತ್ತಿದೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ನಿಮ್ಮ ಸರ್ಕಾರದಲ್ಲಿ ಚೆಕ್ ಪಾಸಾಗುತ್ತಿರಲಿಲ್ಲ:

ಶ್ರೀ ಎಂ. ಪಿ. ವೆಂಕಟೇಶ್.— ಆ ಸರ್ಕಾರದಲ್ಲಿ ಚೆಕ್ ಪಾಸು ಆಗುತ್ತಿರಲಿಲ್ಲ, ನಿಮ್ಮ ಸರ್ಕಾರದಲ್ಲಿ ಕ್ಯಾಷ್ ಕೊಡುತ್ತಿಲ್ಲ.

(ಗೊಂದಲ)

ಶ್ರೀಮತಿ ಮನೋರಮಾ ಮಧ್ವರಾಜ್.— ನಮ್ಮ ರಾಜ್ಯದಲ್ಲಿ ೫೧ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ೧೦-ಸಮುದಾಯ ಆರೋಗ್ಯ ಕೇಂದ್ರಗಳನ್ನು, ೧೦೦ ಪ್ರಸೂತಿ ಕೇಂದ್ರಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ, ತಾವು ನೋಡಬಹುದು. ಏಕೆಂದರೆ ನಾವು ಇಲ್ಲಿ ಸುಮ್ಮ ಸುಮ್ಮನೆ ವಾತನಾಡುವುದಲ್ಲ. ಅಲ್ಪ ಸ್ವಲ್ಪ ಕೆಲಸ ಮಾಡುತ್ತಿದ್ದೇವೆ. ಪೂರ್ತಿ ಮಾಡಿದ್ದೇವೆ ಎಂದು ನಾನು ಹೇಳುವುದಿಲ್ಲ. ಆ ತೃಪ್ತಿ ನನಗೆ ಖಂಡಿತ ಇಲ್ಲ. ಆದರೆ ಏನೂ ಮಾಡದೆ ಮಾಡಿದ್ದೇನೆಂದು ಹೇಳುವ ಸ್ವಭಾವವೂ ನನ್ನಲ್ಲಿಲ್ಲ. ಆದರೆ ಹಂತ ಹಂತವಾಗಿ ಇವೆಲ್ಲವನ್ನೂ ನಿಭಾಯಿಸಿಕೊಂಡು ಹೋಗಬೇಕಾಗಿದೆ. ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆ ಸಮಗ್ರ ಸುಬಂಧಪಟ್ಟ ಆಸ್ಪತ್ರೆ. ಅಲ್ಲಿ ಮೆಡಿಕಲ್ ಕಾಲೇಜಿನ ಹಾಸ್ಪಿಟಲ್ ಕೂಡ ಆಗಿದೆ. ಅದಕ್ಕೆ ಹಂತ ಹಂತವಾಗಿ ಕಾಯಕಲ್ಪ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ತಾವು ಪದೇ ಪದೇ ಕೇಳಿದ್ದರಿಂದ ನಾನು ಹೇಳಿದೆ. ನಿಮ್ಮ ಮುಖ್ಯಮಂತ್ರಿಗಳು ಇದ್ದಾಗ ಅದನ್ನು ಮಾಡಬೇಕಾಗಿತ್ತು ಎಂದು ಹೇಳಿದನೇ ಹೊರತು ಅದು ದೊಡ್ಡ ಆಪಾದನೆಯಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.— ನಾವು ಬೇರೆ ಜಿಲ್ಲೆಯವರಿಗೆ ಅನುಕೂಲ ಮಾಡಿ ಕೊಟ್ಟಿದ್ದೇವೆ.

ಶ್ರೀಮತಿ ಮನೋರಮಾ ಮಧ್ವರಾಜ್.— ನೀವು ಸುಮ್ಮನೆ ಕೂತುಕೊಳ್ಳಿ. ನೀವು ಹಿಂದೆ ಇಲ್ಲಿ ಇರಲಿಲ್ಲ. ತಾವು ನಿರ್ದಿಷ್ಟವಾದ ಆಪಾದನೆಯನ್ನು ನಮ್ಮ ಗಮನಕ್ಕೆ ತಂದರೆ ಖಂಡಿತವಾಗಿ ವಿಚಾರಣೆ ಮಾಡಿಸಿ ತನಿಖೆಗೆ ಒಳಪಡಿಸಿ ಅದನ್ನು ಸರಿಪಡಿಸುತ್ತೇವೆ. ಬಹುಶಃ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಂಡಿದ್ದೇನೆ ಏಳು ತಿಂಗಳ ನನ್ನ ಅಧಿಕಾರಾವಧಿಯಲ್ಲಿ ಹೆಚ್ಚಿನ ವಿಚಾರಗಳನ್ನು...

ಶ್ರೀ ಬಿ. ಹೆಚ್. ಬನ್ನಿಕೋಡ್.— ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ಕೇಳಲಿಲ್ಲ.

ಉಪಾಧ್ಯಕ್ಷರು. — ಅವರು ಉತ್ತರ ಕೊಟ್ಟ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.— ೧೯೮೩ರಿಂದ ೮೯ರವರೆಗೆ ಒಂದೇ ಒಂದು ಪಿ.ಹೆಚ್.ಯು. ಬೇಂಜೂರು ಮಾಡಿಲ್ಲ. ಈಗ ಇವರು ಅಷ್ಟೋ ಇಷ್ಟೋ ಮಾಡುತ್ತೇವೆಂದು ಹೇಳಿದರೂ ನಿಮಗೆ ಸಮಾಧಾನವಿಲ್ಲವಲ್ಲ ಏಕೆ. ಅದಕ್ಕೆ ಏಕೆ ಇಂಟರ್‌ವಿನ್ ಮಾತುತ್ತೀರಿ. ಮಾನ್ಯ ಬನ್ನಿಕೋಡ್‌ರವರು ಇರಲಿಲ್ಲ, ಅವರಿಗೆ ಗೊತ್ತಿಲ್ಲ. ನಾನು ಕಳೆದ ೩-೪ ವರ್ಷದಿಂದ ಒಂದು ಸಣ್ಣ ಹಳ್ಳಿಗೆ ಪಿ.ಹೆಚ್.ಯು. ಮಾಡಿಕೊಡಿ ಎಂದು ಕೇಳುತ್ತಿದ್ದೇನೆ ೧೯೮೩ರಿಂದ ೮೯ರ ತನಕ ಮಾಡಿ ಕೊಡಲಿಕ್ಕೆ ಆಗಲಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಅಧ್ಯಕ್ಷರೆ, ಸಾಮಾನ್ಯವಾಗಿ ವೈದ್ಯರುಗಳಿಂದ ಹಿಡಿದು ಡಿ. ಗ್ರೂಪ್ ನೌಕರರವರೆಗೆ ನಾಲ್ಕು ಸಾವಿರ ವೇಕೆನ್ಸಿ ಇವೆ. ಈ ಬಗ್ಗೆ ನಾನು ಮೊನ್ನೆಲಿಫ್ಟ್ ಸಚಿವ ಹತ್ತಿರ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಮಾತನಾಡಿದ್ದೇನೆಂದು ಹೇಳಿದ್ದೇನೆ. ಆಗ ತಾವು ಇರಲಿಲ್ಲ ಅವರು ಇದನ್ನೆಲ್ಲ ಭರ್ತಿ ಮಾಡಲಿಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ, ಮಾನ್ಯ ಸದಸ್ಯರು ಸಂತೃಪ್ತರಾಗಬೇಕು. ಏಕೆಂದರೆ, ನಾಳೆ ಬೆಳಿಗ್ಗೆ ಆಗುವುದರಲ್ಲಿ ಇದು ಆಗುವುದಿಲ್ಲ. ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ನಾವು ಲಿಸ್ಟ್ ಕಳುಹಿಸಿಕೊಡಬೇಕು ಅಲ್ಲಿ ಸೆಲೆಕ್ಷನ್ ಆದಮೇಲೆ ಇದನ್ನೆಲ್ಲಾ ಭರ್ತಿಮಾಡಲಿಕ್ಕೆ ನಾವು ಪ್ರಯತ್ನ ಪಡುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಬನ್ನಿಕೋಡ್ ಅವರು ನೆನ್ನೆಯಿಂದ ಒಂದು ಕಾಗದ ಬರೆದು ಎಷ್ಟು ವೇಕೆನ್ಸಿ ಇವೆ. ನಾಲ್ಕು ಭರ್ತಿ ಮಾಡಿಕೊಡಿ ಎಂದು ಮುಖ್ಯಮಂತ್ರಿಗಳ ಹತ್ತಿರ ಹೋಗಿದ್ದಾರೆ. ಎಲ್ಲರ ಹತ್ತಿರವೂ ಹೋಗಿದ್ದಾರೆ. ಆದನ್ನು ಈಗ ನನ್ನ ಬಾಯಿಂದ ಏತಕ್ಕೆ ಬರಿಸುತ್ತೀರಿ. ನಾನು ತಮಗೆ ವೇಕೆನ್ಸಿ ಇದ್ದರೆ ಹೆಚ್ಚು ವೈದ್ಯರುಗಳಿದ್ದರೆ ಹಾಕಿಸಿಕೊಡುತ್ತೇನೆಂದು ಹೇಳಲಿಲ್ಲವೆ. ನನ್ನ ಬಾಯಿಂದ ಬರಿಸಬೇಕೆಂದು ತಮ್ಮ ಅಪೇಕ್ಷೆ ಇದೆಯೇನು. ನಾನು ಆಗಲೇ ತಮಗೆ ಹೇಳಿದ್ದೇನೆ ದಯವಿಟ್ಟು ಹಾಗೆ ಮಾಡಬೇಡಿ, ಈಗ ನಾನು ಈ ಒಂದು ಬೇಡಿಕೆಯನ್ನು ಸದನದ ಮುಂದೆ ಮಂಡಿಸಿದ್ದೇನೆ. ಮಾನ್ಯ ಸದಸ್ಯರೆಲ್ಲರಿಗೂ ನನ್ನ ಉತ್ತರದಿಂದ ತೃಪ್ತಿಯಾಗಿದೆ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ, ದಯವಿಟ್ಟು ತಾವೆಲ್ಲರೂ ಯುನಾನಿಮಸ್ ಆಗಿ ಇದನ್ನು ಮಂಜೂರು ಮಾಡ ಬೇಕೆಂದು ತಮ್ಮಲ್ಲಿ ಬೇಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಆರೋಗ್ಯ ಸಚಿವರು ತಮ್ಮ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಪ್ರಸ್ತಾಪ ಮಾಡಿರತಕ್ಕ ಎರಡು ಮೂರು ವಿಚಾರಗಳ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ನಾನು ಸರ್ಕಾರದಿಂದ ಮತ್ತು ಮಾನ್ಯ ಸಚಿವರಿಂದ ಬಯಸುತ್ತೇನೆ. ಈಗ ಆರೋಗ್ಯ ಇಲಾಖೆಯು ವರದಿಯಲ್ಲಿ ೬೫೦ ವೇಕೆನ್ಸೀಸ್ ಇವೆ ಎಂದು ಇದೆ. ತಾವು ೪ ಸಾವಿರ ವೇಕೆನ್ಸಿ ಇವೆ ಎಂದು ಹೇಳಿದಿರಿ. ತಮ್ಮ ಉತ್ತರದಲ್ಲಿ ೫ ಸಾವಿರ ವೇಕೆನ್ಸಿ ಇದೆ ಎಂದು ಹೇಳಿದ್ದೀರಿ. ಒಟ್ಟು ೬ ಸಾವಿರ ಚಿಲ್ಲರೆ ವೇಕೆನ್ಸಿ ಇರಬಹುದು. ಈ ವೇಕೆನ್ಸಿಯಲ್ಲಿ ಕೇವಲ ಡಾಕ್ಟರ್ಸ್ ಮತ್ತು ನರ್ಸಸ್ ಅಪಾಯಿಂಟ್ ಮೆಂಟ್ ಮಾಡಿಕೊಳ್ಳಲಿಕ್ಕೆ ನಿಮಗೆ ವಿತವ್ಯಯ ತೆಗೆದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಅಪ್ರೂವಲ್ ಕೊಟ್ಟಿದ್ದಾರೆಯೆ ? ಈ ಎಲ್ಲಾ ವೇಕೆನ್ಸೀಸ್‌ನ್ನು ತಾವು ಭರ್ತಿಮಾಡುತ್ತಿದ್ದೀರಾ ? ಭರ್ತಿ ಮಾಡುವುದಾದರೆ, ಯಾವಾಗ ಮಾಡುತ್ತೀರ ಎಷ್ಟು ದಿನಗಳಲ್ಲಿ ಮಾಡುವರಿದ್ದೀರಿ. ನಾನು ಪರ್ಟಿಕ್ಯುಲರ್‌ಆಗಿ ಡಾಕ್ಟರ್ಸ್ ಹುದ್ದೆ ಭರ್ತಿ ಮಾಡುವ ಬಗ್ಗೆ ಕೇಳುತ್ತಿದ್ದೇನೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕೇವಲ ಓರಲ್ ಆಗಿ ಅಪ್ರೂವಲ್ ಕೊಡುತ್ತೇವೆಂದು ಹೇಳಿದ್ದಾರಾ ? ಅಥವಾ ಆ ಬ್ಯಾನ್ ಲಿಫ್ಟ್ ಮಾಡಿದ್ದಾರ ? ನಿಮಗೆ ಅಪ್ರೂವಲ್ ಕೊಟ್ಟಿದ್ದಾರೆ, ತಾವು ಪಿ.ಎಸ್.ಸಿ.ಗೆ ಬರೆಯುವವರಿದ್ದೀರ, ಯಾವಾಗ ಬರೆಯುವವನ್ನೀರಿ, ಇದು ಒಂದು. ಎರಡನೆಯದಾಗಿ ಚೈಲ್ಡ್ ಹೆಲ್ತ್ ಇನ್‌ಸ್ಪಿಟ್ಯೂಟ್‌ನ್ನು ತಾವು ಪ್ರಾರಂಭಮಾಡಬೇಕು ಎನ್ನತಕ್ಕ ಪ್ರಸ್ತಾಪವನ್ನು ನಾನು ಮಾಡಿದ್ದೆ. ತಾವು ಅದಕ್ಕೆ ಒಂದು ಕಮಿಟಿ ಇದೆ, ಸಾರ್ವಜನಿಕರಿಂದ ಹಣ ಸಂಗ್ರಹವಾಗಿದೆ ಎಂದು ಹೇಳಿದಿರಿ. ಇದೆಲ್ಲಾ ತಮಗೆ ಗೊತ್ತಿರುವ ವಿಚಾರ. ಈ ವರ್ಷ ಅದನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರ ಏನಾದರೂ ಹಣ ಕೊಡುತ್ತಿದೆಯೇ, ಅದನ್ನು ಪ್ರಾರಂಭ ಮಾಡುತ್ತೀರಾ ? ಇನ್ನು ಮೂರನೆಯದು ಅಂದರೆ ಹೊಸ ಪ್ರೈಮರಿ ಹೆಲ್ತ್ ಯೂನಿಟ್‌ಗಳ ಬಗ್ಗೆ ನಾನು ಕೇಳಿದ್ದೆ. ಹೊಸ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಪ್ರಾರಂಭ ಮಾಡಬಾರದು ಎನ್ನತಕ್ಕಂಥ ಒಂದು ಬ್ಯಾನ್ ಇದೆ. ಅನೇಕ ಜಿಲ್ಲಾ ಪರಿಷತ್‌ನವರು ತಮ್ಮ ತಮ್ಮ ಜಿಲ್ಲೆಯಲ್ಲಿರತಕ್ಕ ಪ್ರೈಮರಿ ಹೆಲ್ತ್ ಯೂನಿಟ್‌ಗಳು ಸಾಕಾಗುವುದಿಲ್ಲ ಎಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದಾರೆಂದು ನನಗೆ ತಿಳಿದುಬಂದಿದೆ. ಆರೋಗ್ಯ ಇಲಾಖೆಯಲ್ಲಿ ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಪ್ರಾರಂಭ ಮಾಡುವುದಿಲ್ಲ ಎನ್ನತಕ್ಕ ಬ್ಯಾನ್ ಇದೆ ಎಂದು ನನಗೆ ತಿಳಿದುಬಂದಿದೆ. ಆ ಒಂದು ಬ್ಯಾನ್ ಲಿಫ್ಟ್ ಮಾಡುವರಿದ್ದೀರಾ. ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಎಲ್ಲಾ ತಾಲ್ಲೂಕುಗಳಲ್ಲೂ ಒಂದೊಂದು ರೂರಲ್ ಮೊಬೈಲ್ ಡಿಸ್‌ಪೆನ್ಸರಿ ಮಾಡಿದರೆ ಗ್ರಾಮೀಣ ಜನರಿಗೆ ಬಹಳ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಸರ್ಕಾರದ

ಮುಂದಿಟ್ಟಿದ್ದೇನೆ. ಆದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ ? ಈ ನಾಲ್ಕು ಪ್ರಶ್ನೆಗಳಿಗೆ ತಾವು ದಯವಿಟ್ಟು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ವಿರೋಧಪಕ್ಷದ ಉಪನಾಯಕರಾದ ಶ್ರೀಮಾನ್ ಸಿಂಧ್ಯ ಅವರು ಹೇಳಿದ ಹಾಗೆ, ಖಾಲಿ ಹುದ್ದೆಗಳು ಯಾವುವು ಇವೆ. ಅವನ್ನೆಲ್ಲಾ ಭರ್ತಿ ಮಾಡಿದರೆ ವರ್ಷಕ್ಕೆ ೧೧ ಕೋಟಿ ರೂಪಾಯಿ ಹೆಚ್ಚು ಖರ್ಚು ಬರುತ್ತದೆ. ಮಾನ್ಯ ಅರ್ಥ ಸಚಿವರು ಒಪ್ಪಿಗೆ ನೀಡಿದ್ದಾರೆ. ಆ ಆದೇಶವನ್ನು ಕೂಡಲೇ ಹೊರಡಿಸುತ್ತಾರೆ. ಹಿಂದೆ ಸ್ಥಾಪಿಸಲಾಗಿದ್ದ ಈ ಆಸ್ಪತ್ರೆಗಳನ್ನು ಕರ್ನಾಟಕ ಸರ್ಕಾರ ೧೯೮೭ರಿಂದ ರದ್ದುಗೊಳಿಸಿದೆ. ಏಕೆಂದರೆ, ರಾಷ್ಟ್ರೀಯ ಆರೋಗ್ಯ ನೀತಿಯಲ್ಲಿ ಹೇಳಿರುವಂತೆ ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಮಾತ್ರ ಸಂಪೂರ್ಣ ಪ್ರಾಥಮಿಕ ಆರೋಗ್ಯ ರಕ್ಷಣೆ ನೀಡಬಲ್ಲದಾಗಿವೆ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳು ಕೇವಲ ಚಿಕಿತ್ಸಾಲಯಗಳೆಂದೂ ಭಾವನೆ.

ಕರ್ನಾಟಕವು ರಾಷ್ಟ್ರದ ಆರೋಗ್ಯ ನೀತಿಯನ್ನು ಅನುಸರಿಸುವಲ್ಲಿ ಇದು ಒಂದು ಸರಿಯಾದ ಪಾರ್ಗವಾಯಿತೆಂದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಸ್ಥಾಪಿಸಬೇಕಾದರೆ ಬಹಳ ಎಚ್ಚರ ವಹಿಸಿ ಈ ಆಧಾರದ ಮೇಲೆ ಪರಿಶೀಲಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ೩೬ ಲಕ್ಷ ರೂಪಾಯಿ ಸಾರ್ವಜನಿಕರಿಂದ ದೇಣಿಗೆ ಬಂದಿದೆ. ಮೂರು ಎಕರೆ ಜಾಗ ಕೂಡ ಸಿಕ್ಕಿದೆ. ಈ ವರ್ಷವೆ ಇದನ್ನು ಪ್ರಾರಂಭ ಮಾಡಬೇಕೆಂಬ ಆಶಯ ಇದೆ. ಆದರೆ ಅದು ಎಷ್ಟರತನಕ ನೆರವೇರುತ್ತದೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಅಂತೂ ನಾನು ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಇನ್ನು ಮೊಬೈಲ್ ಡಿಸ್‌ಪೆನ್ಸರಿ ಮಾಡಬೇಕು ಎಂದು ಏನು ಹೇಳಿದ್ದೀರಿ ನಿಜವಾಗಿ ಇದು ಒಂದು ಒಳ್ಳೆಯ ಸಲಹೆ ಇದು ನಿಜವಾಗಿ ಆಗಬೇಕಾದಂಥಾದ್ದು. ಆದರೆ ಹಣದ ಲಭ್ಯತೆಯನ್ನು ನೋಡಿಕೊಂಡು ನಾನು ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಗದಿದ್ದರೆ ಚಿಂತೆ ಇಲ್ಲ, ನಾನು ಇದರ ಬಗ್ಗೆ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಈ ಪ್ರೈಮರಿ ಹೆಲ್ತ್ ಯೂನಿಟ್‌ಗಳಲ್ಲಿ ಮತ್ತು ಸೆಂಟರುಗಳಲ್ಲಿ ಏನು ವೈದ್ಯರು ಇಲ್ಲ ಅಲ್ಲಿ ೩೫೦-೪೦೦ ಜನ ವೈದ್ಯರನ್ನು ಮತ್ತು ೨೦೦ ಜನ ಕಾಂಪೌಂಡರ್‌ಗಳನ್ನು ದಯವಾಡಿ ಅಲ್ಲಿಗೆ ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಹಣಕಾಸಿನ ಸಚಿವರು ನಮಗೆ ನೇಮಕ ಮಾಡಿಕೊಳ್ಳುವುದಕ್ಕೆ ಪರವಾನಗಿ ಕೊಟ್ಟಿದ್ದಾರೆಂದು ಮಾನ್ಯ ಮಂತ್ರಿಯವರು ಹೇಳಿದರು. ಆದರೆ ನಾನು ಪಿ ಎಸ್ ಸಿ.ನಲ್ಲಿ ವಿಚಾರ ಮಾಡಿದಾಗ ಸರ್ಕಾರದಿಂದ ನೇಮಕ ಮಾಡಿಕೊಳ್ಳುವುದಕ್ಕೆ ಇನ್ನೂ ಕೋರಿಕೆ ಹೋಗೇ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ೩೫೦-೪೦೦ ಜನ ವೈದ್ಯರನ್ನು ೨೦೦ ಜನ ಕಾಂಪೌಂಡರ್ ಅನ್ನು ಅಲ್ಲಿಗೆ ಹಾಕಿ ಜನರಿಂದ ನಾವು ಬೈಯಿಸಿಕೊಳ್ಳುವುದನ್ನು ತಪ್ಪಿಸಿಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅರ್ಥ ಸಚಿವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಂದು ನಾನು ಈಗಾಗಲೆ ಹೇಳಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಹಳ್ಳಿಗಳಿಗೆ ವೈದ್ಯರು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಹಳ್ಳಿಗಳಿಗೆ ಹೋಗದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಇದ್ದೇವೆ.

ಶ್ರೀ ಹೆಚ್ ವಿಶ್ವನಾಥಯ್ಯ—ಈಗ ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಿಗೆ ವೈದ್ಯರನ್ನು ಹಾಕಿದರೂ ಹೋಗುವುದಿಲ್ಲ ಎಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಮತ್ತು ಅವರ ಮೇಲೆ ಶಿಸ್ತಿನ ಕ್ರಮ ಕೂಡ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕಿಂತ ಮೊದ್ಲಾಗಿ ನಾನು ಅವರಿಗೆ ಹೇಳುತ್ತೇನೆ. ಯಾವ ವೈದ್ಯ ಎಲ್ಲೇ ಇರಲಿ ಅವರು ತಾವಾಗಿಯೇ ಗ್ರಾಮೀಣ ಪ್ರದೇಶಕ್ಕೆ ಹೋಗುವುದಕ್ಕೆ ತಯಾರಿದ್ದೇವೆಂದು ಹೇಳಿದರೆ ಅಂತಹವರನ್ನು ಅಲ್ಲಿಗೆ ನೇಮಕ ಮಾಡುತ್ತೀರಾ ? ಇಂತಹವರನ್ನು ಅಲ್ಲಿಗೆ ವರ್ಗಾವಣೆ ಮಾಡುವಾಗ ಈಗಿರುವ ವರ್ಗಾವಣೆಯ ನಿಯಮಾವಳಿಯನ್ನು ಉಲ್ಲಂಘನೆ ಮಾಡಿಯಾದರೂ ಆ ಗ್ರಾಮೀಣ ಪ್ರದೇಶದ ಆಸ್ಪತ್ರೆಗೆ ಅವರನ್ನು ತಾವು ವರ್ಗಾವಣೆ ಮಾಡುವುದಕ್ಕೆ ತಯಾರಾಗಿದ್ದೀರಾ ? ಬೇಕಾದಷ್ಟು ಜನ ವೈದ್ಯರು ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಿಗೆ ಹೋಗುವುದಕ್ಕೆ ತಯಾರಾಗಿದ್ದಾರೆ. ಅಂತಹವರ ಬಗ್ಗೆ ನಾವು ಹೇಳಿದಾಗ ಯಾವುದೋ ಕಾರಣದಿಂದ ಅವರನ್ನು ಅಲ್ಲಿಗೆ ಹಾಕುವುದಿಲ್ಲ. ಅವರು ಹೋಗುತ್ತೇವೆಂದು ಹೇಳುವಂತಹ ಪ್ರಸಂಗವಿದ್ದಲ್ಲಿ ಈಗ ಜಾರಿಯಲ್ಲಿರುವಂಥ ನಿಯಮಗಳ ಉಲ್ಲಂಘನೆಯಾದರೂ ಪರವಾಗಿಲ್ಲ, ಉಲ್ಲಂಘನೆ ಮಾಡಿ ಅವರನ್ನು ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಿಗೆ ಹಾಕಲಿಕ್ಕೆ ತಯಾರಾಗಿದ್ದೀರ ಇನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಅನೇಕ ವಿಧವಾದ ತಜ್ಞರ ಸೇವಾ ವಿಭಾಗಗಳನ್ನು ತೆರೆದಿದ್ದೇವೆಂದು ಹೇಳಿದ್ದೀರಿ ಅದರಲ್ಲಿ ೧೩ ವಿಭಾಗಗಳು ಇವೆ. ಏನು ಇವು ತಜ್ಞರ ಸೇವಾ ವಿಭಾಗಗಳನ್ನು ತೆರೆದಿದ್ದೀರಿ. ಆ ವಿಭಾಗಗಳಿಗೆ ಸಂಬಂಧಪಟ್ಟಂತೆ ಡೆಪ್ಯುಟಿ

ಸರ್ಜನ್ ಮತ್ತು ಅಸಿಸ್ಟೆಂಟ್ ಸರ್ಜನರನ್ನು ಹಾಕಬೇಕಾದಂಥ ಅವಶ್ಯಕತೆ ಇವತ್ತಿನದಿವಸ ಇದೆ. ಆದರೆ ನಾವು ಮತ್ತು ಯಾವುದೇ ಸರ್ಕಾರ ಇದ್ದರೂ ಸಹಿತ ಏನು ನಡೆಯುತ್ತಿದೆಯೆಂದರೆ ಅಲ್ಲಿ ಯಾವುದೇ ತಜ್ಞರ ಸೇವಾ ವಿಭಾಗ ಇದ್ದರೂ ಸಹ ಅದಕ್ಕೆ ಸಂಬಂಧಪಟ್ಟಂತಹ ಸರ್ಜನ್ ಮತ್ತು ಫಿಸಿಷ್ಯನ್ ಅಸಿಸ್ಟೆಂಟ್ ಸರ್ಜನ್‌ರನ್ನು ಹಾಕದೆ ಬೇರೆ ಬೇರೆ ವಿಭಾಗಗಳಲ್ಲಿರುವ ತಜ್ಞರನ್ನು ಹಾಕುವ ಪರಿಪಾಠ ಬೆಳೆದು ಬಂದಿದೆ. ಇದನ್ನು ನಿಲ್ಲಿಸಲಿಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೆ ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ವಿಚಾರದಲ್ಲಿ ನಾವು ಸ್ಯಾಫಿಂಗ್ ಪ್ಯಾಟ್ರನ್ ಅನ್ನು ಅಳವಡಿಸಬೇಕೆಂದು ಆಲೋಚಿಸಿದ್ದೆವು. ಆದರೆ...

ಶ್ರೀ ಹೆಚ್. ವಿಕಾಂತಯ್ಯ.—ಸ್ಯಾಫಿಂಗ್ ಪ್ಯಾಟ್ರನ್ ಈಗಾಗಲೇ ಜಾರಿಯಲ್ಲಿದೆ. ಜಾರಿಯಲ್ಲಿರುವಂಥ ಸ್ಯಾಫಿಂಗ್‌ಪ್ಯಾಟ್ರನ್ ಪ್ರಕಾರ ಸಂಬಂಧಪಟ್ಟ ಸೇವಾ ವಿಭಾಗಗಳಲ್ಲಿ ಯಾರು ತಜ್ಞರಿದ್ದಾರೆ ಅವರನ್ನೇ ಅಲ್ಲಿಗೆ ಪೋಸ್ಟ್ ಮಾಡುವಂತಹ ಪರಿಪಾಠವನ್ನು ನಾವು ಕಲಿತುಕೊಳ್ಳಬೇಕಾಗಿದೆ. ಆದರ ಬಗ್ಗೆ ತಪ್ಪು ಆಸಕ್ತಿ ಏನು ?

ಫಿಸಿಷಿಯನ್‌ನನ್ನು ಹಾಕುವ ಜಾಗದಲ್ಲಿ ಮಕ್ಕಳ ವೈದ್ಯರನ್ನು ಹಾಕಿದರೆ ಹೇಗಾಗಬಹುದು ? ಆದ್ದರಿಂದ ಯಾವ ಯಾವ ಸೇವಾ ವಿಭಾಗದಲ್ಲಿ ಯಾವ ಯಾವ ಪರಿಣತರು ಇರಬೇಕೆಂದು ನಿಯಮವನ್ನು ಇಟ್ಟುಕೊಂಡಿದ್ದೀರೋ ಆದರ ಪ್ರಕಾರವೇ ವೈದ್ಯರನ್ನು ಪೋಸ್ಟಿಂಗ್ಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡುವುದಕ್ಕೆ ನಿಮಗೆ ಇರತಕ್ಕ ತೊಂದರೆ ಏನು ?

ಶ್ರೀಮತಿ ಮನೋರಮಾ ಮಧ್ವರಾಜ್.— ಇದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಈ ಸಾರಿ ವರ್ಗಾವಣೆಯ ವೈಖರಿಯನ್ನು ತಾವೇ ನೋಡಿದ್ದೀರಿ. ನಾವು ಯಾವುದನ್ನು ಆಲೋಚನೆ ಮಾಡುತ್ತೇವೋ ಅಲ್ಲಿಗೆ ಇನ್ನೊಬ್ಬರು ಬಂದು ಪ್ರವೇಶ ಮಾಡಿ ಇಂಥ ವೈದ್ಯರನ್ನು ನಮ್ಮಲ್ಲಿಗೆ ಹಾಕಿ ಎಂದರೆ ನಾವು ಏನು ಮಾಡಬೇಕು ? ನನಗೆ ಇದು ಬಹಳ ದುಃಖವಾಗುತ್ತದೆ. ಇದರಿಂದಾಗಿ ನಾವು ಆ ನಿಯಮವನ್ನು ಅನುಸರಿಸುವುದಕ್ಕೆ ಆಗಲಿಲ್ಲ ಮುಂದೆ ಇಂಥ ತಪ್ಪುಗಳು ಆಗದಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ವಿಕಾಂತಯ್ಯ.— ಗ್ರಾಮಾಂತರ ಪ್ರದೇಶದ ಆಸ್ಪತ್ರೆಗೆ ಹೋಗಲು ಇಷ್ಟಪಡುವಂಥ ವೈದ್ಯರನ್ನು ಅಲ್ಲಿಗೆ ಹಾಕಲಿಕ್ಕೆ ತಯಾರಾಗಿದ್ದೀರ.

ಶ್ರೀಮತಿ ಮನೋರಮಾ ಮಧ್ವರಾಜ್.— ನಿಯಮವನ್ನು ಉಲ್ಲಂಘನೆ ಮಾಡಿ ಹಾಕುವುದಕ್ಕಾಗುವುದಿಲ್ಲ. ಅವರ ಒಪ್ಪಿಗೆಯನ್ನು ಪಡೆದು ಏನಾದರೂ ಅಂಥ ತೀವ್ರ ಪರಿಸ್ಥಿತಿಯಿದ್ದಲ್ಲಿ ಖಂಡಿತ ನಾವು ಅದನ್ನು ಮಾಡಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಡಾ. ಎ.ಬಿ. ಮಲಕರೆಡ್ಡಿ.— ಮೇಡಂ, ಈಗ ಪಾಪ ವಿವಾದ ಬೇಡ. ತಮಗೂ ಕೂಡ ಈ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡಬೇಕೆಂದು ಮನಸ್ಸಿದೆ. ಆದ್ದರಿಂದ ನಾನು ಒಂದು ಸೂಚನೆ ಮಾಡುತ್ತೇನೆ. ತಾವು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದಿರಿ. ೧೯೭೨ನೇ ಇಸವಿವರೆಗೆ ಅಂದರೆ ಇದಕ್ಕಿಂತ ಮೊದಲು ಈ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ದೂರುಗಳು ಇರಲಿಲ್ಲ. ಆದರೆ ೧೯೭೨ನೇ ಇಸವಿಯಿಂದ ೮೨ನೇ ಇಸವಿಯವರೆಗೆ ಸ್ವಲ್ಪಮಟ್ಟಿಗೆ ಇತ್ತು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, I don't think you are going to appoint me as a member of the committee. If you are going to appoint me as a member in that committee, I will sit.

ಉಪಾಧ್ಯಕ್ಷಿಣಿಯವರು.— ತಾವು ಕ್ಲಾರಿಫಿಕೇಷನ್ ಕೇಳಿ.

ಡಾ. ಎ.ಬಿ. ಮಲಕರೆಡ್ಡಿ.— ಈ ವಿಚಾರ ಈ ಮನೆಯಲ್ಲಿ ಚರ್ಚೆಯಾಗಿ ಉಪಯುಕ್ತವಾದ ನಿರ್ಣಯವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಈ ಮೆಡಿಕಲ್ ಕಾಲೇಜು ಶಿಕ್ಷಣಕ್ಕಾಗಿ ಇಲ್ಲಿ ಕೋಟ್ಯಾಂತರ ರೂಪಾಯಿಗಳ ಮಂಜೂರಾತಿಯನ್ನು ಕೊಡಬೇಕಾಗುತ್ತದೆ. ಈ ಸದನದಲ್ಲಿ ಎಲ್ಲರಿಗೂ ಸಮಾಧಾನವಾಗುವಂತೆ ನಾನು ಹೇಳುತ್ತಿದ್ದೇನೆ. ಇಡೀ ಇಂಡಿಯಾದಲ್ಲೇ ಇದು ಒಂದು ಸ್ಕ್ಯಾಂಡಲ್ ಆಗಿದೆ. ಆದ್ದರಿಂದ ಹೇಳುತ್ತಿದ್ದೇನೆ. ೧೯೮೨ರ ನಂತರ ಅಪಪ್ರಚಾರ ಪ್ರಾರಂಭ ಆಯಿತು. ಇದು ಏತಕ್ಕೆ ಆಯಿತು ಎಂಬುದನ್ನು ತಾವು ವಿಚಾರ ಮಾಡಬೇಕು. ಮಾನ್ಯ ಸಿದ್ದವೀರಪ್ಪನವರೂ ಮತ್ತು ಮಾನ್ಯ ಚನ್ನಬಸಪ್ಪನವರೂ ಮಂತ್ರಿಗಳಾಗಿದ್ದಾಗ ಒಂದು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡಿದ್ದರು. ಕ್ಯಾಪಿಟೇಷನ್ ಶುಲ್ಕವನ್ನು ರದ್ದುಮಾಡಿದ್ದೇವೆ ಎಂದು ಒಂದು ಆಜ್ಞೆಯನ್ನು ಹೊರಡಿಸಿದರಿ. ಇದರಿಂದ ಕ್ಯಾಪಿಟೇಷನ್ ಶುಲ್ಕ ಇನ್ನೂ ಹೆಚ್ಚಾಗುವುದಕ್ಕೆ ಅವಕಾಶವಾಯಿತು.

ಮಕ್ಕಳೆಲ್ಲಾ ನನ್ನ ಸುತ್ತಿರ ಬರುತ್ತಾರೆ. ನಾನು ಏನು ಮಾಡುತ್ತೇನೆ, ನಾನು ಇಂತಿಂಥ ಇನ್‌ಸ್ಟ್ರು ಮೆಂಟ್ಸ್‌ನ್ನು ತರಬೇಕಾಗಿದೆ, ದೊಡ್ಡ ಕಟ್ಟಡವನ್ನು ಕಟ್ಟಿಸಬೇಕಾಗಿದೆ, ಇದಕ್ಕೆಲ್ಲಾ ದುಡ್ಡು ಬೇಕು, ಆದ್ದರಿಂದ ೩ ಲಕ್ಷ ಕೊಡಿ ಎಂದು ಕೇಳುತ್ತೇನೆ. ಇದನ್ನು ಪ್ರೂವ್ ಮಾಡಿ ಎಂದರೆ ಯಾರು ಮಾಡುವುದಕ್ಕಾಗುತ್ತದೆ ? ಆದುದರಿಂದಲೇ ಹಿಂದೆ ಮಂತ್ರಿಗಳಾಗಿದ್ದಂಥ ಅನುಭವಿಕರು ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದರು. I was also one of the members of the Selection Committee. ಅದರಲ್ಲಿ ನಾನೂ ಕೂಡ ಇದ್ದೆ. ಅದೇ ಹಾಲ್‌ನಲ್ಲೇ ಕುಳಿತು ೧೯೭೯ ರಿಂದ ೮೨ನೇ ಇಸವಿಯವರೆಗೆ ಕ್ಯಾಂಡಿಡೇಟ್ಸ್‌ನ್ನು ಸೆಲೆಕ್ಷನ್ ಮಾಡಿದ್ದೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಏನು ರೂಲ್ಸ್ ಕೊಟ್ಟಿದ್ದರು ಅದರ ಪ್ರಕಾರವೇ ಸೆಲೆಕ್ಷನ್ ಮಾಡುತ್ತಿದ್ದೆ. ಹಿಂದೆ ಮಾನ್ಯ ಚೆನ್ನಬಸಪ್ಪ ನವರು ಸಿದ್ದವೀರಪ್ಪನವರು ಇದ್ದಾಗ ಚೆನ್ನಾಗಿ ನಡೆಯುತ್ತಿತ್ತು. ಆದ್ದರಿಂದ ನಾನು ಹೇಳುತ್ತಿದ್ದೇನೆ. Director of Medical Education was the Chairman of the Selection Committee even for the capitation colleges ನಾನು ಛೇರ್ಮನ್ ಆಗಿದ್ದಾಗ ಈ ವ್ಯವಸ್ಥೆ ಇತ್ತು. ಆಗ ಯಾವ ದೂರುಗಳೂ ಬರುತ್ತಿರಲಿಲ್ಲ. The principal of Bellary Medical college and the Deputy Director were there. On the management side the Chairman of the Management the Principal of the concerned college and one more member was there. ಅವರು ೩ ಜನ ಇರುತ್ತಿದ್ದರು, ಇವರು ೩ ಜನ ಇರುತ್ತಿದ್ದರು ಕ್ಯಾಪಿಟೇಷನ್ ತೆಗೆದುಕೊಳ್ಳತಕ್ಕ ಕಾಲೇಜಿನವರದ್ದು ಮತ್ತು ಸರ್ಕಾರಿ ಕಾಲೇಜುಗಳವರದ್ದೂ ಇವರೇ ಜಾಹೀರಾತನ್ನು ಕೊಡುತ್ತಿದ್ದರು. The Demand Draft was used to be addressed to the Director of Medical Education, not in the name of the Chairman of Medical Colleges. ತಾವು ಇನ್ನೊಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾದ್ದು ಏನೆಂದರೆ, ಈ ಕಾಲೇಜುಗಳು ಎಕನಾಮಿಕಲಿ ವಯಬಲ್ ಆಗಿರಬೇಕು. Economically they should be viable. Those seats were called capitation-cum-merit seats. ೧೯೮೨ರ ನಂತರ ೧೯೮೩ ರಲ್ಲಿ ಇದನ್ನು ಕೈಬಿಟ್ಟರು. ಆದ್ದರಿಂದ ಈ ರೀತಿಯ ದೂರುಗಳು ಬರುತ್ತಿವೆ. ನೀವು ನಿರ್ದಿಷ್ಟವಾಗಿ ಕಂಪ್ಲೇಂಟ್‌ನ್ನು ಕೊಡಿ ಎಂದರೆ ನಾವು ಹೇಗೆ ಕೊಡುವುದು ? ಅಲ್ಲಿ ದುಡ್ಡನ್ನು ಕೊಟ್ಟಿದ್ದೂ ಖರೆ ಇರುತ್ತದೆ, ಅದನ್ನು ತೆಗೆದುಕೊಂಡಿದ್ದೂ ಖರೆ ಇರುತ್ತದೆ. ಆದರೆ ಅದೆನ್ನು ನಿರ್ದಿಷ್ಟವಾಗಿ ಪ್ರೂವ್ ಮಾಡುವುದಕ್ಕೆ ಹೇಗೆ ಸಾಧ್ಯ ? ಮೆಡಿಕಲ್ ಕಾಲೇಜುಗಳು ಜೀವಂತ ಇರಬೇಕು ಕ್ಯಾಪಿಟೇಷನ್ ಅಬಾಲಿಷ್ ಆಗಬೇಕೆಂದಿದ್ದರೆ ನೀವು ಈ ರೀತಿ ಒಂದು ಕಮಿಟಿಯನ್ನು ಮಾಡ ಬೇಕು ಏಕೆಂದರೆ, ಅನೇಕ ತರಹದ ದೂರುಗಳು ಬರುತ್ತಿವೆ. ಅನೇಕ ಸಾರಿ ಈ ಸದನದಲ್ಲಿ ಚರ್ಚೆ ಯಾಗುತ್ತಿದೆ. ಇದನ್ನು ತಾವು ಅಲಕ್ಷ್ಯ ಮಾಡುವಂಥಿಲ್ಲ. ಅದಕ್ಕಾಗಿ ಈ ರೀತಿಯ ವ್ಯವಸ್ಥೆಯನ್ನು ನೀವು ಮಾಡಿದರೆ ಮಾತ್ರ ಈ ಕ್ಯಾಪಿಟೇಷನ್ ಅಬಾಲಿಷ್ ಆಗುತ್ತದೆ, ಇಲ್ಲವಿದ್ದರೆ ಸಾಧ್ಯವಿಲ್ಲ. ಈಗ ಸಮ್ಮ ಕರ್ನಾಟಕದ ಮಕ್ಕಳೇ ೧.೫೦ ಲಕ್ಷ ರೂಪಾಯಿಗಳ ಶುಲ್ಕ ಕೊಡಬೇಕಾಗಿ ಬಂದಿದೆ.

ಉಪಾಧ್ಯಕ್ಷರು.— ಅವರು ಉತ್ತರ ಕೊಡುತ್ತಾರೆ.

ಡಾ ವಿ.ಬಿ. ಮಲಕರೆಡ್ಡಿ.— ಅವರು ಲೇಮೆನ್ ಇದ್ದಾರೆ She is not a technical person It is my duty to guide her. ಆದ್ದರಿಂದ ನಾನು ಹೇಳುತ್ತಿದ್ದೇನೆ. ನಾಳೆ ಮಾನ್ಯ ಧರ್ಮಸಿಂಗ್‌ರವರೂ ಕೂಡ ತಮ್ಮ ಮಗನಿಗೆ ಸೀಟ್ ಕೊಡಿಸಬೇಕಾದರೆ ೧.೫೦ ಲಕ್ಷ ರೂಪಾಯಿ ಗಳನ್ನು ಕೊಡಬೇಕಾಗುತ್ತದೆ. ಅವರಿಗೆ ಎಲ್ಲಿಂದ ಕೊಡುವುದಕ್ಕಾಗುತ್ತದೆ.

ಅದಕ್ಕೆ ನಾನು ಹೇಳುವುದು ಏನೆಂದರೆ ಈಗ ಒಂದು ಕಮಿಟಿ ಮಾಡಿ. ಕರ್ನಾಟಕದ ಮಕ್ಕಳಿಗೆ ಇಷ್ಟು, ಹೊರಗಿನವರಿಗೆ ಇಷ್ಟು ಎಂದು ನಿಗದಿ ಮಾಡಿ. ಆಗ ದೂರುಗಳು ಬರುವುದಿಲ್ಲ.

ಶ್ರೀಮತಿ ಮನೋರಮ ಮಾಧ್ವರಾಜ್.—ಹಿಂದಿನ ಸರ್ಕಾರದವರು ಒಂದು ಕಮಿಟಿ ಮಾಡಿ ವರದಿಯನ್ನು ತರಿಸಿಕೊಂಡು ಅದರ ಪ್ರಕಾರ ಆಜ್ಞೆ ಮಾಡಿದ್ದಾರೆ. ಏಕಾಏಕಿ ಅದನ್ನು ಉಲ್ಲಂಘನೆ ಮಾಡುವುದಲ್ಲ, ನಾವು ಮಾಡುತ್ತೇವೆ : ಆದರೆ ರಾತ್ರೋರಾತ್ರಿ ಅದನ್ನು ಸರಿಪಡಿಸಲಿಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಒಂದು ಹೊಸ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಲು ನಮ್ಮ ಸಂಪುಟದ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡಿದ್ದೇವೆ. ಆ ರೀತಿಯಾಗಿ ಆ ಕಮಿಟಿಯವರು ಅದನ್ನು ಕೂಲಂಕುಷವಾಗಿ ಪರಿಶೀಲಿಸಿ ಅದರಲ್ಲಿ ಏನಾದರು ವ್ಯತ್ಯಾಸ ಮಾಡಬೇಕೆಂದರೆ ಅದನ್ನು ಮಾಡಲಿಕ್ಕೆ ಖಂಡಿತ ನಾವು ತಯಾರಾಗಿದ್ದೇವೆ. ಅದನ್ನು ಒಂದು ಹತೋಟಿಯಲ್ಲಿ ತರುವುದಕ್ಕೆ ನಾವು ಖಂಡಿತ ಪ್ರಯತ್ನ ಪಡುತ್ತೇವೆ. ಅದರಲ್ಲಿ ದಯಾದಾಕ್ಷಿಣ್ಯವಿಲ್ಲದೆ ನಾವು ಕೆಲಸ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಭಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀ ಜನ ಆರೋಗ್ಯ ಸಚಿವರಾದರು, ಇವರು ಶನೇಯವರು. ಇವರು ಆರೋಗ್ಯ ಸಚಿವರಾದ ಮೇಲೆ ನಮ್ಮ ರಾಜ್ಯದ ಆರೋಗ್ಯ ಸಮಗ್ರವಾಗಿ ಆಗಿದೆ. ಮತ್ತೆ ಕ್ಯಾಪಿಟೇಷನ್ ಬಗ್ಗೆ ನಿಲುವೇನು ಎಂದು ತಮ್ಮ ಉತ್ತರದಿಂದ ಗೊತ್ತಾಯಿತು. ನಾಳೆಯಿಂದ ಯಾರೂ ಕಾಲೇಜಿಗೆ ಕ್ಯಾಪಿಟೇಷನ್ ಕೊಡುವಂತಿಲ್ಲ. ಈಗ ತಮ್ಮ ಇಲಾಖೆಗೆ ಆದರ ಆನಾರೋಗ್ಯದ ಸಲುವಾಗಿ ಬಹಳ ಖರ್ಚು ಮಾಡುತ್ತಿದ್ದೀರಿ. ಎಲ್ಲರೂ ಆರೋಗ್ಯವಂತರಾದ ಮೇಲೆ ನಾಳೆಯಿಂದಲೇ ಎಲ್ಲ ತಾಲ್ಲೂಕು ಆಸ್ಪತ್ರೆಗಳನ್ನು ರದ್ದು ಮಾಡಿ ಆ ಹಣವನ್ನು ಬೇರೆ ಇಲಾಖೆಗೆ ತಾವು ಕಳುಹಿಸಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ೮ ವರ್ಷಗಳ ಹಿಂದೆ ಒಬ್ಬ ದಾನಿಗಳು ನಾಗರಾಜಶೆಟ್ಟಿಯವರು ೨ ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ಹೃದಯರೋಗ ಚಿಕಿತ್ಸಾ ವಾರ್ಡ್‌ನ್ನು ಕಟ್ಟಿಸಿಕೊಟ್ಟರು. ನಾಲ್ಕು ವರ್ಷಗಳ ಹಿಂದೆ ಒಬ್ಬರು ಮಂತ್ರಿಗಳು ಹೋಗಿ ಅದನ್ನು ಇನ್ಯಾಗುರೇಟ್ ಮಾಡಿದರು. ಅಲ್ಲಿಗೆ ಇಲ್ಲಿಯವರೆಗೆ ಎಕ್ವಿಪ್‌ಮೆಂಟ್ಸ್ ಕೊಟ್ಟಿಲ್ಲ, ಡಾಕ್ಟರನ್ನೂ ಕೊಟ್ಟಿಲ್ಲ. ಹಾಸನದಲ್ಲಿ ಸುತ್ತಮುತ್ತ ಹಾರ್ಟ್ ಅಟ್ಯಾಕ್ ಆದವರು ಇಲ್ಲಿ ಬರುವುದರೊಳಗೆ ಒಬ್ಬರೂ ಬದುಕುವುದೇ ಇಲ್ಲ. ಈ ಪರಿಸ್ಥಿತಿಯನ್ನು ಅನೇಕ ಸಲ ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಇದುವರೆಗೂ ಅಲ್ಲಿಗೆ ಎಕ್ವಿಪ್‌ಮೆಂಟ್ಸ್ ಕೊಟ್ಟಿಲ್ಲ, ಡಾಕ್ಟರನ್ನೂ ಪೋಸ್ಟ್ ಮಾಡಿಲ್ಲ. ಆದ್ದರಿಂದ ದಯವಾಗಿ ಈಗಲಾದರೂ ಮಾನ್ಯ ಸಚಿವರು ಆ ಕೆಲಸವನ್ನು ತಕ್ಷಣ ಮಾಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಈಗತಾನೆ ಈ ವಿಷಯವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, Capitation is an evil ಎಂದು ರಿಪೋರ್ಟಲ್ಲಿ ಆಕ್ಟ್ ಆಯಿತು. ಆದಾದ ಮೇಲೆ ರಿಪೋರ್ಟಲ್ಲಿ ಅದು ಇಂಪ್ಲಿಮೆಂಟೇಷನ್‌ಗೆ ಬಂತು. ಅದು ಒಂದ ಮೇಲೆ ಮೈನಾರಿಟೀಸ್ ಇನ್‌ಸ್ಟಿಟ್ಯೂಷನ್ಸ್ ಏನು ಇದೆಯೋ ಅವಕ್ಕೆ ಕ್ಯಾಪಿಟೇಷನ್ ಫೀಸನ್ನು ತೆಗೆದುಕೊಳ್ಳಬಹುದೆಂದು ತಿಳಿಯಿತು. ಆಮೇಲೆ ಅದರ ಜೊತೆಗೆ ಮೈನಾರಿಟಿ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ ಕ್ಯಾಪಿಟೇಷನ್ ತೆಗೆದುಕೊಳ್ಳುವುದರ ಜೊತೆಗೆ ಅವರು ಯಾರಿಗೂ ಗೌವರ್ನಮೆಂಟ್ ಸೀಟನ್ನು ಕೊಡಬೇಕಾಗಿಲ್ಲ. ಅವರೇ ಎಷ್ಟು ಸೀಟ್‌ಗಳನ್ನು ಬೇಕಾದರೂ ಫಿಲಪ್ ಮಾಡಿಕೊಳ್ಳಬಹುದೆಂದು ಆಯಿತು. ಅದಾದ ಮೇಲೆ when it has been decided that capitation is an evil, ಮೈನಾರಿಟೀಸ್‌ಗೆ ಬೇರೆ ಇವಿಲ್ ಮೆಜಾರಿಟಿಗೆ ಬೇರೆ ಇವಿಲ್ ಎಂದು ಎಲ್ಲಿಯಾದರು ಕಾನೂನಿನಲ್ಲಿಯಾಗಲಿ, ನ್ಯಾಯರೀತಿಯಲ್ಲಾಗಲಿ ಇದೆಯೇ ಎನ್ನುವ ಬಗ್ಗೆ ನನಗೆ ಮಾಹಿತಿ ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಈಗ ಅನೇಕ ಇನ್‌ಸ್ಟಿಟ್ಯೂಷನ್ಸ್‌ನ ಮೈನಾರಿಟಿ ಇನ್‌ಸ್ಟಿಟ್ಯೂಷನ್ಸ್ ಅಂತ ಏನು ನಾವು ಹೆಸರನ್ನು ಕರೆದಿದ್ದೇವೊ ಅವರು ಈಗ ಮಣಿಪಾಲಿನ ಮೆಡಿಕಲ್ ಕಾಲೇಜ್ ಮತ್ತು ಮೈನಾರಿಟಿ ಹೆಸರಿನಲ್ಲಿ ಎಂಜಿನೀಯರಿಂಗ್ ಕಾಲೇಜನ್ನು ಜಯರಾಮ್ ಎಂಬ ಒಬ್ಬರಿಗೆ ಕೊಟ್ಟಿದ್ದಾರೆ. ಅವರು ಯಾರೂ ಕೂಡ ೫೦ ಪರ್ಸೆಂಟ್ ಸೀಟ್ಸ್ ಮೈನಾರಿಟೀಸ್‌ಗೆ ೫೦ ಪರ್ಸೆಂಟ್ ಅಪಾಯಿಂಟ್‌ಮೆಂಟ್ ಕೂಡ ಮೈನಾರಿಟೀಸ್‌ಗೆ ರಿಸರ್ವ್ ಆಗಬೇಕು. ಹಾಗಿದ್ದರೆ ಮಾತ್ರ ಅದನ್ನು ಮೈನಾರಿಟೀಸ್ ಇನ್‌ಸ್ಟಿಟ್ಯೂಷನ್ಸ್ ಎಂದು ಕರೆಯುವುದು. ಈ ರೀತಿ ಯಾವ ಇನ್‌ಸ್ಟಿಟ್ಯೂಷನ್ಸ್ ಕೂಡ ಫಾಲೋ ಮಾಡುತ್ತಿಲ್ಲ. ಎಲ್ಲರೂ ವಯಲೇಟ್ ಮಾಡುತ್ತಿದ್ದಾರೆ. 50% of the seats must be allotted only to the minorities a particular minority community ಎಂದು ಯಾವುದೆಯೋ ಅದನ್ನು ವಯಲೇಟ್ ಮಾಡಿದ್ದಾರೆ. ಅದರ ಜೊತೆಗೆ ಕ್ಯಾಪಿಟೇಷನ್ ಫೀಸ್ ತೆಗೆದುಕೊಂಡು ಇನ್‌ಸ್ಟಿಟ್ಯೂಷನ್ಸನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ.....

ಉಪಾಧ್ಯಕ್ಷರು.— ನೀವು ಭಾಷಣ ಮಾಡುತ್ತಾ ಇದ್ದೀರಿ.

ಶ್ರೀ ಎ.ಟಿ. ರಾಮಸ್ವಾಮಿ.— ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಬೇಕಾಗಿದೆ. ಇದರ ಜೊತೆಗೆ ೧೨೧ ಸರ್ಜನ್ಸ್ ಪೋಸ್ಟಿಗಳಿವೆ. Total surgeons posts-121 in Karnataka. At present there are only five surgeons in the Government. How can the P G. Students pull on and pursue their studies? This is a gross irregularity on the part of the Government. ಇದರ ಬಗ್ಗೆ ಕೂಡ ನನಗೆ ಮಾಹಿತಿ ಬೇಕು.

ಶ್ರೀಮತಿ ವನೋರಮಾ ವೆಂಕಟ್ರಾಜ್.— ಮಾನ್ಯ ಸಭಾಧ್ಯಕ್ಷರೆ, ಈ ರಾಷ್ಟ್ರದಲ್ಲಿ ಅಲ್ಪ ಸಂಖ್ಯಾತರಿಗೆ ಸಂವಿಧಾನದ ರಕ್ಷಣೆ ಇರುವುದರಿಂದ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವು ಹೆಚ್ಚು ಕೈ ಹಾಕುವುದಕ್ಕೆ ಆಗುವುದಿಲ್ಲ. ಬಹುಶಃ ಅವರು ಮಣಿಪಾಲದವರ ಬಗ್ಗೆ ಕೇಳಿದ್ದಾರೆ. ಅವರೂ ಕೂಡ ಭಾಷಾ ಅಲ್ಪಸಂಖ್ಯಾತರು ಎಂದು ಕೋರ್ಟಿಗೆ ಹೋಗಿ ಅದರ ರಕ್ಷಣೆ ಪಡೆದಿದ್ದಾರೆ. ಹಾಗಾಗಿ ನಾವು ಅವರಿಗೆ ಹೀಗೆ ಮಾಡಬೇಕೆಂದು ಇನ್‌ಸಿಸ್ಟ್ ಮಾಡಲಿಕ್ಕೆ ಸ್ವಲ್ಪ ಕಷ್ಟ ಉಂಟು.

ಉಪಾಧ್ಯಕ್ಷರು.— ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಹೀಗಿದೆ.

"ಅಭಿಯಾಚನೆ ಕ್ರಮಾಂಕ ೩೧ — ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು—

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಬಿನಾಂಕ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬೦.೫೦.೬೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬.೦೧,೦೦ ೦೮೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು."

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಬೇಡಿಕೆಗೆ ಒಪ್ಪಿಗೆ ದೊರೆಯಿತು

ಶ್ರೀ ವಾಟಾಳ್ ನಾಗರಾಜ್.— ನಾನು ಸೌದು ಎನ್ನುವವರ ಪರವಾಗಿಯೂ ಇಲ್ಲ. ಇಲ್ಲ ಎನ್ನುವವರ ಪರವಾಗಿಯೂ ಇಲ್ಲ. ತಟಸ್ಥನಾಗಿದ್ದೇನೆ.

ಉಪಾಧ್ಯಕ್ಷರು.— ಈಗ ಖಾಸಗಿ ಕಾರ್ಯಕಲಾಪಗಳು. ಶ್ರೀಯುತ ವಾಟಾಳ್ ನಾಗರಾಜ್ ಅವರು ಮಾತನಾಡಬೇಕು.

ಖಾಸಗಿ ಕಾರ್ಯ ಕಲಾಪಗಳು

ನಿಸರ್ಗ ಸಂಪತ್ತು ನಾಶವಾಗುವುದನ್ನು ತಪ್ಪಿಸಲು ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ).— ಮಾನ್ಯ ಉಪಾಧ್ಯಕ್ಷರೆ, ಈಗತಾನೆ ಆರೋಗ್ಯ ಇಲಾಖೆಯ ಬೇಡಿಕೆ ಮುಗಿಯಿತು. ಈಗ ಖಾಸಗಿ ಕಾರ್ಯಕ್ರಮಕ್ಕೆ ಬರುತ್ತಿದ್ದೇವೆ. ತಮ್ಮ ಅಪ್ಪಣೆಯನ್ನು ಪಡೆದು ಕೆಲವು ವಿಚಾರಗಳನ್ನು ತಮ್ಮ ಮುಂದೆ ನಾನು ಮಂಡಿಸುತ್ತಿದ್ದೇನೆ.

(ಶ್ರೀ ಟಿ.ಬಿ. ಜಯಚಂದ್ರ ಇವರು ಅಧ್ಯಕ್ಷ ಪೀಠದಲ್ಲಿದ್ದರು)

ಈ ರಾಜ್ಯದಲ್ಲಿ ನಿಸರ್ಗ ಸಂಪತ್ತನ್ನು ನಾಶ ಮಾಡುತ್ತಿರುವುದನ್ನು ತಪ್ಪಿಸಲು ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ಸಮಗ್ರವಾಗಿ ರಾಷ್ಟ್ರೀಕರಣ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ನಿರ್ಣಯವನ್ನು ಮಂಡಿಸಿದ್ದೇನೆ. ಈಗಾಗಲೇ ನಿರ್ಣಯದ ಬಗ್ಗೆ ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನಾದರೂ ಹಿಂದಿನ ಸಭೆಯಲ್ಲಿ ತಮಗೆ ತಿಳಿಸಿದಾಗ, ಈ ಸಭೆಯಲ್ಲೇ ಒಂದು ಪ್ರಮುಖವಾದಂಥ ನಿರ್ಣಯ ಇರುವಾಗ ಈ ನಿರ್ಣಯವನ್ನು ಕೆಡೆಗಾಣಿಸಿ ಸರ್ಕಾರ ಗ್ರಾನೈಟ್ ಉದ್ಯಮವನ್ನು ೧೦ ವರ್ಷಗಳ ಕಾಲ ನಿಷೇಧಿಸುವ ಬಗ್ಗೆ ಆದೇಶ ಹೊರಡಿಸಿದೆ. ಈಗಾಗಲೇ ಸಮೃದ್ಧವಾದ ಸಾಮಿಲ್‌ಗಳು ಜನ ನಿಸರ್ಗವನ್ನು ನಾಶ ಮಾಡುವುದಕ್ಕೋಸ್ಕರವಾಗಿ, ಗ್ರಾನೈಟ್ ಕಲ್ಲನ್ನು ಲೂಟಿಗೋಸ್ಕರವಾಗಿ ಅದರ ದರೋಡೆಗೋಸ್ಕರವಾಗಿ ಅನುಮತಿ ಪಡೆಯುವುದಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದಾಳಿ ಇಟ್ಟಿದ್ದಾರೆ. ದಾಳಿ ಇಟ್ಟಿರತಕ್ಕ ಅರ್ಜಿಗಳ ಬಗ್ಗೆ ವ್ಯವಸ್ಥೆ ಸಚಿವರು ಗಮನಹರಿಸಿ ಅರ್ಜಿಗಳನ್ನು ತರಿಸಿಕೊಂಡು ಸಮಗ್ರವಾಗಿ ಪರಿಶೀಲನೆ ನಡೆಸಿ.

೧.೦೫ ಪಿ.ಎಂ.

ಯಾರ ಹೆಸರಿನಲ್ಲಿ ಅರ್ಜಿಗಳು ಬಂದಿವೆ? ಅದರ ಹಿಂದೆ ಯಾರು ಇದ್ದಾರೆ? ಅರ್ಜಿಯಲ್ಲಿ ಹೆಸರು ಒಬ್ಬರದಿ ಇದ್ದರೆ ಅದರ ಹಿಂದೆ ಪ್ರಭಾವಯುತ ವ್ಯಕ್ತಿಗಳು ಯಾರ್ಯಾರು ಇದ್ದಾರೆ ಎನ್ನುವುದು ತಮ್ಮ ಗಮನಕ್ಕೆ